# ಬಳಕೆದಾರರಿಗೆ ಸೇವೆಯ ನಿಯಮಗಳು ಮತ್ತು ಷರತ್ತುಗಳು

ಒಬೋಪೇ ಹಣ ಸಂದಾಯ ಸೇವೆಗಳನ್ನು ತನ್ನ ಗ್ರಾಹಕರಿಗೆ ನೀಡುತ್ತದೆ. ಆ ಸೇವೆಯ ನಿಬಂಧನೆಗಳನ್ನು ಈ ದಾಖಲಾತಿಯಲ್ಲಿ ವಿವರವಾಗಿ ನೀಡಲಾಗಿದೆ.

“ನಿಯಮಗಳು ಮತ್ತು ಷರತ್ತುಗಳು” ಮುಂದಿನ ಬಾಕ್ಸನ್ನು ಟಿಕ್ ಮಾಡಿ ನೋಂದಣಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಮುಗಿಸಿದರೆ ನೀವು ಒಬೋಪೇ ವ್ಯಾಲಿಟ್ಟಿನ ಬಳಕೆದಾರರಾಗಲು ಅರ್ಹರಾಗಿದ್ದೀರಿ ಮತ್ತು ನೀವು ಸೇವೆಯ ಎಲ ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಿ, ಅರ್ಥೈಸಿಕೊಂಡು ಅವುಗಳಿಗೆ ಅನುಗುಣವಾಗಿ ನಡೆದುಕೊಳ್ಳಲು ಒಪ್ಪಿದ್ದೀರಿ ಎಂದು ಖಾತರಿ ಪಡಿಸಿದಂತೆ.

ನೀವು ಈ ನಿಯಮಗಳು ಮತ್ತು ಷರತ್ತುಗಳನ್ನು ಹುಷಾರಾಗಿ ಓದಿ ಎಂದು ಒತ್ತಿ ಹೇಳುತ್ತೇವೆ. ನೀವು ನಮ್ಮೊಂದಿಗೆ ಮಾಡುತ್ತಿರುವ ನೋಂದಣಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಮುಗಿಸಿದರೆ ಒಪ್ಪಂದಗಳ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿದವರಾಗಿರುತ್ತೀರಿ. ಅವಶ್ಯಕತೆ ಬಿದ್ದಾಗ ಕಾನೂನು ಪ್ರಕಾರ ನಿಮ್ಮನ್ನು ಈ ನಿಯಮಾವಳಿಗಳಿಗೆ ಅನುಸಾರವಾಗಿ ನಡೆಸಿಕೊಳ್ಳಲಾಗುವುದು ಎಂದು ನೀವು ಗಮನಿಸಬೇಕು.

1. ವ್ಯಾಖ್ಯಾನಗಳು

ಈ ನಿಯಮಗಳು ಮತ್ತು ಷರತ್ತುಗಳಲ್ಲಿ ವಿವರಿಸಿರುವ ಮತ್ತು ದಪ್ಪ ಅಕ್ಷರಗಳಲ್ಲಿರುವ ಪದಗಳಿಗೆ ಈ ಕೆಳಗೆ ಹೇಳಿರುವ ಪದಗಳ ಅರ್ಥಗಳಿರುತ್ತವೆ:

 "ಖಾತೆ" ಅಂದರೆ ಒಬ್ಬರು ಬಳಕೆದಾರರು https://www.obopay.com ನಲ್ಲಿ ಯಶಸ್ವಿಯಾಗಿ ನೋಂದಾವಣಿ ಪ್ರಕ್ರಿಯೆಯನ್ನು ಮುಗಿಸುವ ಮೂಲಕ ತಮಗಾಗಿ ಸೃಷ್ಟಿಸಿದ ಖಾತೆ. ಅದರಲ್ಲಿ ಒಬೋಪೆ ಥೈಲಿಯ ಕುರಿತಾದ ಮಾಹಿತಿಯಿರುತ್ತದೆ.

 "ಕಾಯ್ದೆ” ಎಂದರೆ ಪೇಮೆಂಟ್ ಅಂಡ್ ಸೆಟಲ್ಮೆಂಟ್ ಸಿಸ್ಟಮ್ಸ್ ಆಕ್ಟ್, 2007, ಹಾಗು ಅದರ ಯಾವುದೇ ತಿದ್ದುಪಡಿಗಳು, ಬದಲಾವಣೆಗಳು ಅಥವಾ ಅದರ ಮರು ಜಾರಿಗಳು ಅಥವಾ ಆಯಾಯಾ ಕಾಲಕ್ಕೆ ಜಾರಿಯಾಗುವ ವಿಷಯಗಳು.

 "ಅರ್ಹ" ಎಂದರೆ ಈ ನಿಯಮಗಳು ಮತ್ತು ಷರತ್ತುಗಳಲ್ಲಿನ 3.1ನೇ ಖಂಡಿಕೆಯಲ್ಲಿ ಅರ್ಹತೆಗೆಂದು ಇರುವ ನಿಯಮಗಳಿಗೆ ಅನುಸಾರವಾಗಿ ಇರುವುದು.

 "ವ್ಯಾಪಾರಿ" ಎಂದರೆ https://www.obopay.com ಜಾಲತಾಣಗಳಲ್ಲಿ ಪಟ್ಟಿ ಮಾಡಲಾಗಿರುವ, ತಮ್ಮ ಸರಕು ಮತ್ತು ಸೇವೆಗಳಿಗೆ ಒಬೋಪೆ ಥೈಲಿಯ ಮೂಲಕ ಪಾವತಿಗಳನ್ನು ಸ್ವೀಕರಿಸುವ ಯಾವುದೇ ಸಂಸ್ಥೆ, ಮತ್ತು ಪತ್ರರೂಪದಲ್ಲಿ ನಮ್ಮ ಜೊತೆ ಒಪ್ಪಂದಕ್ಕೆ ಬಂದಿರುವ ಸಂಸ್ಥೆ. ನಿಮಗೆ ಯಾವುದೇ ಮಾಹಿತಿಯನ್ನು ನೀಡದೇ https://www.obopay.com ಜಾಲತಾಣದಲ್ಲಿನ ವ್ಯಾಪಾರಿಗಳ ಪಟ್ಟಿಯನ್ನು ಕಾಲಕಾಲಕ್ಕೆ ನಾವು ಪರಿಷ್ಕರಿಸಬಹುದು.

 "ಒಬೋಪೆ ಥೈಲಿ" ಒಬೋಪೆ ಜಾರಿ ಮಾಡಿದ ಒಂದು ಅರೆ-ಮುಚ್ಚಿದ ಪಾವತಿ ಸಾಧನ, ಅದನ್ನು ಬಳಸಿ ಬಳಕೆದಾರರು ವ್ಯಾಪಾರಿಗಳಿಂದ ಸೇವೆ ಮತ್ತು ಸರಕುಗಳನ್ನು ಖರೀದಿಸಬಹುದು (ಥೈಲಿಯಿಂದ ವ್ಯಾಪಾರಿಗೆ ವರ್ಗಾವಣೆ) ಅಥವಾ ಥೈಲಿಯಿಂದ ಥೈಲಿಗೆ ಮತ್ತು ಥೈಲಿಯಿಂದ ಬ್ಯಾಂಕಿಗೆ ವರ್ಗಾವಣೆಗಳಂಥ ಲಭ್ಯವಿರುವ, ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳು ಮತ್ತು ಈ ನಿಯಮಗಳು ಮತ್ತು ಷರತ್ತುಗಳಿಗೆ ಅನುಗುಣವಾದ ಕೆಲವು ಹಣಕಾಸು ಸೇವೆಗಳನ್ನು ಪಡೆಯಲು ಬಳಸಬಹುದಾದ ವ್ಯವಸ್ಥೆ.

 "ಒಬೋಪೇ", "ನಾವು", "ನಮ್ಮ" ಅಥವಾ "ನಮ್ಮನ್ನು" ಎಂದರೆ ಒನ್ ಒಬೋಪೆ ಮೊಬೈಲ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಭಾರತೀಯ ಕಂಪನಿಗಳ ಕಾಯ್ದೆ 1956ರ ಅಡಿಯಲ್ಲಿ ಸೇರಿಸಲಾದ, ಒಂದು ಖಾಸಗಿ ಲಿಮಿಟೆಡ್ ಕಂಪನಿಯಾಗಿದ್ದು ತಮ್ಮ ಕಾರ್ಪೊರೇಟ್ ಕಚೇರಿಯನ್ನು #150, 6ನೇ ಮಹಡಿ, ಟವರ್ ಸಿ, ಡೈಮಂಡ್ ಡಿಸ್ಟ್ರಿಕ್ಟ್, ಹಳೆಯ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು– 560008 ಇಲ್ಲಿ ಹೊಂದಿದೆ. ಒಬೋಪೆ ಆ ಕಾಯ್ದೆಯ ನಿಬಂಧನೆಗಳಡಿಯಲ್ಲಿನ ಒಂದು ಅಧಿಕೃತ ಪಾವತಿ ಮತ್ತು ತೀರುವಳಿ ವ್ಯವಸ್ಥೆಗಳ ಚಾಲಕ.

 "ಆರ್ ಬಿ ಐ" ಅಂದರೆ ಭಾರತೀಯ ರಿಸರ್ವ್ ಬ್ಯಾಂಕ್.

 "ಆರ್ ಬಿ ಐ ನಿಬಂಧನೆಗಳೆಂದರೆ" ಅಂದರೆ ಮೇಲೆ ಹೇಳಿದ ಕಾಯ್ದೆ ಮತ್ತು ಅದರಡಿಲ್ಲಿ ಮಾಡಲಾದ ನಿಬಂಧನೆಗಳು. ದ ಇಶ್ಯೂಯನ್ಸ್ ಅಂಡ್ ಆಪರೇಶನ್ ಆಫ್ ಪ್ರಿ-ಪೇಯ್ಡ್ ಇನ್ಸ್ ಟ್ರುಮೆಂಟ್ಸ್ ಇನ್ ಇಂಡಿಯಾ (ಆರ್ ಬಿ ಐ) ಡೈರೆಕ್ಷನ್ಸ್, 2009 ಹಾಗು ಕಾಲಕಾಲಕ್ಕೆ ಆರ್ ಬಿ ಐ ನಿಂದ ಜಾರಿಯಾಗುವ ಮತ್ತು ಪರಿಷ್ಕೃತಗೊಳ್ಳುವ ಯಾವುದೇ ಅಧಿಸೂಚನೆಗಳು, ಮುಖ್ಯ ಸುತ್ತೋಲೆಗಳು, ನಿಯಮಗಳು ಅಥವಾ ಅಧಿಸೂಚನೆಗಳು.

 "ನಿಯಮಗಳು ಮತ್ತು ಷರತ್ತುಗಳು" ಅಂದರೆ ಇಲ್ಲಿ ಪಟ್ಟಿ ಮಾಡಿರುವ ಒಬೋಪೆಯ ಸೇವೆಗಳ ಬಳಕೆಯ ನಿಯಮಗಳು ಮತ್ತು ಷರತ್ತುಗಳು ಹಾಗು ಮುಂದೆ ಪರಿಷ್ಕರಿಸಬಹುದಾದಂಥವು.

 "ಬಳಕೆದಾರ", "ನೀವು" or "ನಿಮ್ಮ" ಎಂದರೆ ಯಾವುದೇ ಅರ್ಹ ವ್ಯಕ್ತಿ, ಈ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುವ ಮತ್ತು ಅನ್ವಯಿಸುವ ನಿಯಮಗಳಡಿಯಲ್ಲಿ ಒಬೋಪೆ ಥೈಲಿಯ ಬಳಕೆಗೆ ಯಶಸ್ವಿಯಾಗಿ ನೋಂದಾಯಿಸಿಕೊಂಡು ಒಪ್ಪಂದ ಮಾಡಿಕೊಂಡಿರುವವರು

 "ಥೈಲಿಯಿಂದ ಬ್ಯಾಂಕಿಗೆ ವರ್ಗಾವಣೆ” ಎಂದರೆ ಒಬ್ಬರು ಬಳಕೆದಾರರು ತಮ್ಮ ಒಬೋಪೆ ಥೈಲಿಯಿಂದ ನಿಗದಿಪಡಿಸಿದ ಉಳಿತಾಯ ಅಥವಾ ಚಾಲ್ತಿ ಖಾತೆಗೆ ಹಣವನ್ನು ವರ್ಗಾಯಿಸಬಹುದಾದ ಒಬೋಪೆ ನೀಡುವ ಒಂದು ಸೇವೆ.

 "ಥೈಲಿಯಿಂದ ಥೈಲಿಗೆ ವರ್ಗಾವಣೆ" ಎಂದರೆ ಒಬ್ಬರು ಬಳಕೆದಾರರು ತಮ್ಮ ಒಬೋಪೆ ಥೈಲಿಯಿಂದ ಇನ್ನೊಂದು ಒಬೋಪೆ

ಥೈಲಿಗೆ ಹಣವನ್ನು ವರ್ಗಾಯಿಸಬಹುದಾದ, ಆರ್ ಬಿ ಐ ನಿಬಂಧನೆಗಳು ಮತ್ತು ಇಲ್ಲಿನ ನಿಯಮಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಒಬೋಪೆ ನೀಡುವ ಒಂದು ಸೇವೆ.

## 2. ಅರ್ಥವಿವರಣೆಗಳು

1. ಯಾವುದಾದರೂ ಒಂದು ಉಲ್ಲೇಖಕ್ಕೆ ಸಂಬಂಧಿಸಿದ್ದರೆ ಅದು ಹೆಚ್ಚಿನವಕ್ಕೂ ಅನ್ವಯಿಸುತ್ತದೆ. ಹೆಚ್ಚಿನವಕ್ಕೆ ಅನ್ವಯಿಸುತ್ತದೆ. ಹೆಚ್ಚಿನವಕ್ಕೆ ಅನ್ವಯಿಸಿದ್ದು ಒಂದಕ್ಕೂ ಅನ್ವಯಿಸುತ್ತದೆ. ಒಂದು ಉಲ್ಲೇಖವು ಗಂಡನ್ನು ಉದ್ದೇಶಿಸಿ ಹೇಳಿದ್ದರೆ ಅದು ಹೆಣ್ಣಿಗೂ ಸಂಬಂಧಿಸಿರುತ್ತದೆ, ಹಾಗೆಯೇ ಹೆಣ್ಣನ್ನು ಉದ್ದೇಶಿಸಿ ಹೇಳಿದ್ದರೆ ಅದು ಗಂಡಿಗೂ ಸಂಬಂಧಿಸಿರುತ್ತದೆ. (ಇವು ಅನ್ಯಥಾ ವಿಶೇಷವಾಗಿ ಹೇಳಿಲ್ಲದಿದ್ದರೆ)
2. ಶೀರ್ಷಿಕೆಗಳು ಮತ್ತು ಮುಖ್ಯಪದಗಳನ್ನು ಅನುಕೂಲಕ್ಕಷ್ಟೇ ಬಳಸಲಾಗಿದೆ ಮತ್ತು ಅವು ನಿಯಮಾವಳಿಗಳು ಮತ್ತು ಷರತ್ತುಗಳ ವ್ಯಾಖ್ಯಾನದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.
3. ಒಬ್ಬ ಸಾಮಾನ್ಯ ವ್ಯಕ್ತಿಗೆ ಸಂಬಂಧಿಸಿದಂತೆ ಯಾವುದಾದರೂ ಉಲ್ಲೇಖವಿದ್ದರೆ, ಆ ಸಂದರ್ಭಕ್ಕೆ ಅನ್ಯಥಾ ಹೇಳಿಲ್ಲದಿದ್ದರೆ, ಅದು ಅವರ ವಾರಸುದಾರರು, ಹಕ್ಕುಬಾಧ್ಯರು ಮತ್ತು ಅನುಮತಿಸಿದ ಅಧಿಕಾರಸ್ಥರಿಗೆ ಸಂಬಂಧಿಸಿದ್ದಾಗಿರುತ್ತದೆ. ಹಾಗೆಯೇ, ಒಬೋಪೆಯಂಥ ಯಾವುದೇ ಕಾನೂನಾತ್ಮಕ ವ್ಯಕ್ತಿಯು, ಆ ಸಂದರ್ಭಕ್ಕೆ ಅನ್ಯಥಾ ಹೇಳಿಲ್ಲದಿದ್ದರೆ, ಅದರ ಭಾಗೀದಾರರು, ವಾರಸುದಾರರು ಮತ್ತು ಅನುಮತಿಸಿದ ಅಧಿಕಾರಸ್ಥರಿಗೆ ಸೇರಿರುತ್ತದೆ.

## 3. ಥೈಲಿಯ ಸೃಷ್ಟಿ – ಅರ್ಹತೆ

ನಮ್ಮ ಸೇವೆಗಳನ್ನು ಬಳಸಲು ನಿಮ್ಮನ್ನು "ಅರ್ಹ" ಎಂದು ಪರಿಗಣಿಸಬೇಕೆಂದರೆ ನೀವು ಕಡ್ಡಾಯವಾಗಿ:

1. ಭಾರತದ ವಾಸಿಯಾಗಿರಬೇಕು
2. ವ್ಯವಹಾರಗಳನ್ನು ನಡೆಸಿ ಸೇವೆಗಳನ್ನು ಭಾರತದ ರೂಪಾಯಿಗಳಲ್ಲಿ ಮಾತ್ರ ಬಳಸಬೇಕು; ಬೇರಾವುದೇ ರೂಪದ ಹಣದಲ್ಲಲ್ಲ.
3. ನೆಟ್ವರ್ಕ್ ಇದ್ದು ಸೇವೆಗಳನ್ನು ಬೆಂಬಲಿಸುವ ಸಾಧನಗಳನ್ನು ಬಳಸಬೇಕು
4. ನೀವು ಅರ್ಹರಿದ್ದಲ್ಲಿ ಮಾತ್ರ ಸೇವೆಗಳನ್ನು ಪಡೆಯಬಹುದು. ನೀವು ಅರ್ಹರಲ್ಲದಿದ್ದರೆ, ನಮ್ಮೊಂದಿಗೆ ನೋಂದಾಯಿಸುವ ಯಾವುದೇ ಪ್ರಯತ್ನಗಳನ್ನು ತಕ್ಷಣ ಕೈಬಿಡಿ.
5. ನಿಮ್ಮ ಖಾತೆಯನ್ನು ಅರ್ಹರಲ್ಲದ ಯಾವುದೇ ವ್ಯಕ್ತಿ ಬಳಸುತ್ತಿದ್ದಾರೆಂದು ನಂಬಲು ನಮಗೆ ಕಾರಣವಿದ್ದರೆ, ಅಥವಾ ಬೇರೆ ಯಾವುದಾದರೂ ಕಾರಣಕ್ಕೆ ನಿಮ್ಮ ಖಾತೆಯನ್ನು ತಕ್ಷಣ ಕೊನೆಗೊಳಿಸಲಾಗುವುದು.
6. ನೀವು ಅರ್ಹರೆಂದು ನೀವು ನೀಡುವ ಪ್ರತಿನಿಧಿತ್ವದ ಮೇಲೆ ನಾವು ಸಂಪೂರ್ಣ ವಿಶ್ವಾಸ ಇಟ್ಟಿರುತ್ತೇವೆ ಹಾಗು ನೀವು ಅಥವಾ ನಿಮ್ಮ ಖಾತೆಯನ್ನು ಅಥವಾ ಒಬೋಪೆ ಥೈಲಿಯನ್ನು ಉಪಯೋಗಿಸುವ ಯಾವುದೇ ವ್ಯಕ್ತಿಯು ಅನರ್ಹರೆಂದು ತಿಳಿದುಬಂದರೆ ನಾವು ಕಾನೂನಾತ್ಮಕವಾಗಿ ಜವಾಬ್ದಾರರಲ್ಲ.

## 4. ಥೈಲಿ ಸೃಷ್ಟಿ

ಒಂದು ಖಾತೆಯನ್ನು ತೆರೆಯಲು ನೀವು ಈ ಕೆಳಗಿನ "ನೋಂದಣಿ ದತ್ತಾಂಶ"ಗಳನ್ನು ನೀಡಲೇಬೇಕು:
1. ಒಂದು ಸೂಕ್ತ ಮತ್ತು ಚಾಲ್ತಿಯಲ್ಲಿರುವ ಮಿಂಚಂಚೆ (ಇ-ಮೆಯಿಲ್) ವಿಳಾಸ
2. ಒಂದು ಸರಿಯಾದ ಮತ್ತು ಚಾಲ್ತಿಯಲ್ಲಿರುವ ನಿಮ್ಮ ಹೆಸರಿನಲ್ಲಿ ನೋಂದಾಯಿತವಾಗಿರುವ ದೂರವಾಣಿ ಸಂಖ್ಯೆ.
3. ಒಂದು ರಹಸ್ಯಪದ

4. ಭಾರತೀಯ ರಿಸರ್ವ್ ಬ್ಯಾಂಕು ನಿಗದಿಪಡಿಸುವ "ನಿಮ್ಮ ಗ್ರಾಹಕರನ್ನು ಅರಿಯಿರಿ ನಿಯಮಗಳಿಗೆ" ತೃಪ್ತಿಯಾಗುವ ಅಥವಾ ನಮಗೆ ಅವಶ್ಯವೆನಿಸುವ ಯಾವುದೇ ಹೆಚ್ಚುವರಿ ಮಾಹಿತಿ
5. ನೀವು ನಮಗೆ ನೀಡುವ ನೋಂದಣಿ ದತ್ತಾಂಶ ಅಥವಾ ಬೇರೆ ಯಾವುದೇ ಮಾಹಿತಿಯು ನಿಮ್ಮ ಅರಿವಿನ ಮಟ್ಟಿಗೆ, ನಿಮಗಿರುವ ಮಾಹಿತಿಗೆ ಮತ್ತು ನಿಮ್ಮ ವಿಶ್ವಾಸಕ್ಕನುಗುಣವಾಗಿ ಸತ್ಯವಾಗಿರಬೇಕು. ನೀವು ನೀಡಬಹುದಾದ ಯಾವುದೇ ತಪ್ಪು ನೋಂದಣಿ ಮಾಹಿತಿಗೆ ನಾವಲ್ಲ ಬದಲಿಗೆ ನೀವೇ ಕಾನೂನಾತ್ಮಕವಾಗಿ ಜವಾಬ್ದಾರರಾಗಿರುತ್ತೀರಿ.
6. ದಯವಿಟ್ಟು ನಿಮ್ಮ ನೋಂದಣಿ ಮಾಹಿತಿಯನ್ನು ಮೂರನೇ ವ್ಯಕ್ತಿಯೊಂದಿಗೆ ಹಂಚಿಕೊಳ್ಳಬೇಡಿ ಏಕೆಂದರೆ ನಿಮಗೆ ಮಾತ್ರವೇ ನಿಮ್ಮ ನೋಂದಣಿ ಮಾಹಿತಿಯ ಗೋಪ್ಯತೆಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯಿರುತ್ತದೆ ಹಾಗೂ ನಿಮ್ಮ ಖಾತೆ ಮತ್ತು ಒಬೋಪೆ ಥೈಲಿಯ ಎಲ್ಲಾ ಚಟುವಟಿಕೆಗಳು ಮತ್ತು ವ್ಯವಹಾರಗಳನ್ನು ನೀವು ಮಾಡಿದರೂ ಅಥವಾ ಮೂರನೆಯ ವ್ಯಕ್ತಿ ಮಾಡಿದರೂ ಅವೆಲ್ಲಕ್ಕೂ ನೀವೇ ಜವಾಬ್ದಾರರಾಗಿರುತ್ತೀರಿ.
7. ನಿಮ್ಮ ಖಾತೆ ಮತ್ತು ಒಬೋಪೆ ಥೈಲಿಯ ಸುರಕ್ಷತೆಯನ್ನು ಕಾಪಾಡಲು ನೀವು ಮಾಡಬೇಕಾದುದು (ಅ) ನಿಮ್ಮ ಖಾತೆಯ ಯಾವುದೇ ರೀತಿಯ ಅನಧಿಕೃತ ಬಳಕೆಯನ್ನು ಕಾರ್ಪೊರೇಟ್ ಗ್ರಾಹಕರಾದರೆ ನಿಮ್ಮ ಮಾನವ ಸಂಪನ್ಮೂಲ ತಂಡದ ಮೂಲಕ ನಮಗೆ ಮತ್ತು obopaysupport@obopay.com ಇಲ್ಲಿಗೆ ತಕ್ಷಣ ಮಾಹಿತಿ ನೀಡುವುದು.(ಬ) ನಿಮ್ಮ ಪ್ರತಿ ವ್ಯವಹಾರದ ಅವಧಿಯ ನಂತರ ನಿಮ್ಮ ಖಾತೆಯಿಂದ ಲಾಗೌಟ್ ಆಗುವುದನ್ನು ಖಾತರಿಸಿಪಡಿಕೊಳ್ಳುವುದು.
8. ಆರ್ ಬಿ ಐ ನಿಬಂಧನೆಗಳಿಗೆ ಅನುಗುಣವಾಗಿ ಹಣ ಸಾಗಾಣಿಕೆ ಮತ್ತು ಭಾರತದಲ್ಲಿ ಭಯೋತ್ಪಾದನೆಗೆ ಹಣ ಒದಗಿಸುವುದನ್ನು ತಡೆಯಲು ನಮಗೆ ನಿಮ್ಮ ನೋಂದಣಿ ದತ್ತಾಂಶ ಅಥವಾ ನೀವು ನೀಡಿರುವ ಇನ್ನ್ಯಾವುದೇ ಮಾಹಿತಿ ತಪ್ಪೆಂದು ಕಂಡು ಬಂದಲ್ಲಿ, ಅಥವಾ ನಿಮ್ಮ ಖಾತೆಯ ಸುರಕ್ಷತೆಯನ್ನು ಯಾವುದೇ ಮಾರ್ಗದಲ್ಲಿ ಸಡಿಲಿಸಲಾಗಿದೆ ಎಂದು ನಮಗನಿಸಿದರೆ ನಿಮ್ಮ

ಖಾತೆಯನ್ನು ರದ್ದು ಮಾಡಬಹುದು ಅಥವಾ ತಕ್ಷಣದಿಂದಲೇ ಜಾರಿಗೆ ಬರುವಂತೆ ನಿಮ್ಮ ಖಾತೆಯನ್ನು ನಿಲ್ಲಿಸಬಹುದು.
9. ಆರ್ ಬಿ ಐ ನಿಬಂಧನೆಗಳಿಗೆ ಬದ್ಧರಾಗಿರಲು ನಿಮ್ಮ ಹೆಸರಿನಲ್ಲಿ ನೋಂದಣಿಯಾಗಿರುವ ಫೋನ್ ಸಂಖ್ಯೆಯೊಂದಿಗೆ ಒಂದಕ್ಕಿಂತ ಹೆಚ್ಚು ಖಾತೆಗಳನ್ನು ತೆರೆಯಲು ನಿಮಗೆ ಅವಕಾಶ ನೀಡಲಾಗುವುದಿಲ್ಲ.
10. ನೀವು ನಿಮ್ಮ ಖಾತೆಯ MPIN ಅನ್ನು ಮರೆತ ಸಂದರ್ಭದಲ್ಲಿ, ನೀವು <Forgot MPIN> ಮೇಲೆ ಕ್ಲಿಕ್ ಮಾಡಿ ಹೊಸ MPIN ಕೋರಬಹುದು. ನಮ್ಮ ನಿರ್ಧಾರದ ಮೇಲಷ್ಟೇ ಅವಲಂಬಿತವಾಗಿ, ನಮಗೆ ಅರ್ಜಿದಾರರ ಗುರುತಿನ ಬಗ್ಗೆ ಸಮಾಧಾನವಾದರೆ ಮಾತ್ರ ಹೊಸ ರಹಸ್ಯಪದವನ್ನು ನೀಡಲು ನಿಮ್ಮ ಗುರುತಿಗೆ ಹೊಂದಾಣಿಕೆಯಾದರೆ ನಾವು ನಿಮ್ಮ ನೋಂದಾಯಿತ ಇ-ಮೆಯಿಲ್ ವಿಳಾಸಕ್ಕೆ ನಾವೊಂದು ಇ-ಮೆಯಿಲ್ ಕಳಿಸುತ್ತೇವೆ. ನಿಮ್ಮ MPIN ಅನ್ನು ಮತ್ತೆ ಸೃಷ್ಟಿಸಿಕೊಳ್ಳಲು ಸೂಚನೆಗಳನ್ನು ನೀಡುತ್ತೇವೆ. ನಾವು ನಿಮ್ಮ ನೋಂದಾಯಿತ ಇ-ಮೆಯಿಲ್ ಗೆ ಗುಪ್ತಪದ ಸೂಚನೆಗಳನ್ನು ನೀಡಿದ ಮೇಲೆ ನಿಮ್ಮ ಖಾತೆಯಿಂದ ನಡೆಯುವ ಯಾವುದೇ ವ್ಯವಹಾರಕ್ಕೆ ನೀವೇ ಜವಾಬ್ದಾರಿಯಾಗಿರುತ್ತೀರಿ.
ನೀವು ನಿಮ್ಮ ಖಾತೆಯನ್ನು ಅಥವಾ ನಿಮ್ಮ ಒಬೋಪೆ ಥೈಲಿಯನ್ನು ನಿಮ್ಮ ಗುಪ್ತಪದವನ್ನು ಮರೆಯುವುದರ ಹೊರತಾಗಿ ಬೇರೆ ಕಾರಣಗಳಿಗೆ ತೆರೆಯಲು ಸಾಧ್ಯವಾಗದ ಸಂದರ್ಭದಲ್ಲಿ, ನಿಮ್ಮ ಮಾನವ ಸಂಪನ್ಮೂಲ ತಂಡದ ಮೂಲಕ ನಮಗೆ ಮಾಹಿತಿ ನೀಡಿ ಮತ್ತು ನಿಮ್ಮ ಖಾತೆಯನ್ನು ಬ್ಲಾಕ್ ಮಾಡಲು ತಿಳಿಸಿ. ನೀವು ಬ್ಲಾಕ್ ಮಾಡಲು ಕೋರುವ ಮುಂಚೆಯೇ ನಿಮ್ಮ ಖಾತೆಯಿಮದ ನಡೆದಿರಬಹುದಾದ ಯಾವುದೇ ಅನಧಿಕೃತ ವ್ಯವಹಾರಗಳಿಗೆ ನಮ್ಮನ್ನು ಹೊಣೆಯಾಗಿಸಲು ಬರುವುದಿಲ್ಲ.

## 4. ನಿಮ್ಮ ಗ್ರಾಹಕರನ್ನು ಅರಿಯಿರಿ (KYC)

1.ಭಾರತೀಯ ರಿಸರ್ವ್ ಬ್ಯಾಂಕು(ಆರ್ ಬಿ ಐ) ಪ್ರಕಾರ ಕೆವೈಸಿ ಷರತ್ತುಗಳನ್ನು ಪೂರ್ಣಗೊಳಿಸದೆ ಪ್ರಿಪೆಯ್ಡ್ ಪೇಮೆಂಟ್ ಇನ್ಸ್ಟ್ರುಮೆಂಟ್ಸ್ ಅನ್ನು ನೀಡಲು ಬರುವುದಿಲ್ಲ ಎಂದು ತಮ್ಮ 11 ಅಕ್ಟೋಬರ್ 2018ರಂದು ಹೊರಡಿಸಿದ ಮುಖ್ಯ ಸೂಚನೆಗಳಲ್ಲಿ ನಿಗದಿಗೊಳಿಸಿದೆ. ಆರ್ ಬಿ ಐ ಸುತ್ತೋಲೆಯನ್ನು ಓದಲು ಇಲ್ಲಿ ಕ್ಲಿಕ್ಕಿಸಿ: http://bit.ly/2A1AZOe

2. ಒಬೋಪೆ ಪೇಮೆಂಟ್ ಸಲ್ಯೂಷನ್ಸ್ ಸೇವೆಗಳನ್ನು ಬಳಸಿಕೊಳ್ಳಲು ಮತ್ತು ಪ್ರಿಪೆಯ್ಡ್ ಇನ್ಸ್ಟ್ರುಮೆಂಟ್ ಹೋಲ್ಡರ್, ನಾನು ಒಬೋಪೆಗೆ ಅವಶ್ಯಕ ದಾಖಲೆಗಳನ್ನು ಪರಿಶೀಲಿಸಲು ಮತ್ತು ಪಡೆಯಲು ಮತ್ತು ಬಯೋಮೆಟ್ರಿಕ್ ದೃಢೀಕರಣವನ್ನು ಅವಶ್ಯವಿದ್ದಲ್ಲೆಲ್ಲಾ ಮಾಡಲು ಮತ್ತು ಆರ್ ಬಿ ಐ ನಿಗದಿಪಡಿಸಿದ ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅನುಮತಿ ನೀಡುತ್ತಿದ್ದೇನೆ. ನಾನು ಹೊಂದಿರುವ ಪ್ರಿಪೆಯ್ಡ್ ಪೇಮೆಂಟ್ ಇನ್ಸ್ಟ್ರುಮೆಂಟ್ ನ ಅರ್ಹತಾ ಅವಧಿಯಲ್ಲಿ, ಭವಿಷ್ಯದಲ್ಲಿ ಆರ್ ಬಿ ಐ ನಿಗದಿಪಡಿಸಬಹುದಾದ ಯಾವುದೇ ಹೆಚ್ಚುವರಿ ತಪಾಸಣೆಗಳಿಗೆ/ಪರಿಶೀಲನೆಗಳಿಗೆ/ದೃಢೀಕರಣಗಳನ್ನು ಮಾಡಲು ನಾನು ಒಬೋಪೆಗೆ ನನ್ನ ಅನುಮತಿಯನ್ನು ನೀಡುತ್ತಿದ್ದೇನೆ.

## 5. ಥೈಲಿಯನ್ನು ತುಂಬುವುದು ಮತ್ತು ಬಳಸುವುದು – ಒಬೋಪೆ ಥೈಲಿಯ ಲಕ್ಷಣಗಳು

1.ಈ ನಿಯಮಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ನೀವು ನೋಂದಣಿ ಪ್ರಕ್ರಿಯೆನ್ನು ಪೂರ್ಣಗೊಳಿಸಿ ಯಶಸ್ವಿಯಾಗಿ ಒಂದು ಖಾತೆಯನ್ನು ತೆರೆದ ನಂತರ, ನೀವು ನಮ್ಮ ಸೇವೆಗಳನ್ನು ಒಬೋಪೆ ಥೈಲಿಯ ಮೂಲಕ ಪಡೆಯಲು ಆರಂಭಿಸಬಹುದು.
2. ಒಬೋಪೆ ಥೈಲಿಯ ಲಕ್ಷಣಗಳು ಈ ಕೆಳಗಿನಂತಿವೆThe features of OBOPAY Wallet are as follows:

| **A.** | **ಲಕ್ಷಣಗಳು** | **ಷರತ್ತುಗಳು** |
|---|---|---|
| 1 | ನೀಡುವ ಚಲಾವಣೆ. | ಭಾರತೀಯ ರೂಪಾಯಿಗಳು ಮಾತ್ರ. |
| 2 | ಹಣವನ್ನು ಮತ್ತೆ ತುಂಬುವುದು | ಕನಿಷ್ಠ ಕೆವೈಸಿಯೊಂದಿಗೆ ಗರಿಷ್ಠ ಲಭ್ಯ ಬಾಕಿ ಹಣವು ತಿಂಗಳೊಂದಕ್ಕೆ ರೂ.10,000(ಹತ್ತು ಸಾವಿರ ಭಾರತೀಯ ರೂಪಾಯಿಗಳು ಮಾತ್ರ) ಕ್ಕಿಂತ ಹೆಚ್ಚು ಇರುವಂತಿಲ್ಲ ಅಥವಾ ಸಂಪೂರ್ಣ ಕೆವೈಸಿಯೊಂದಿಗೆ ತಿಂಗಳೊಂದಕ್ಕೆ ರೂ. 1,00,000ಕ್ಕಿಂತ ಹೆಚ್ಚಿರುವಂತಿಲ್ಲ ಎಂಬ ಷರತ್ತುಗಳಿಗೆ ಬದ್ಧವಾಗಿ ಒಬೋಪೆ ಥೈಲಿಯನ್ನು ಮತ್ತೆ ಮತ್ತೆ ತುಂಬಬಹುದು. |
| 3 | ನಗದು ಹಿಂಪಡೆತ | ಆರ್ ಬಿ ಐ ನಿಬಂಧನೆಗಳ ಅಡಿಯಲ್ಲಿ ಒಬೋಪೆ ಥೈಲಿಯಿಂದ ನಗದು |

| | | |
|---|---|---|
| | | ಹಿಂಪಡೆತ ಮತ್ತು ಬಾಕಿ ಹಿಂಪಡೆಯಲು ಅನುಮತಿ ಇಲ್ಲ. |
| 4 | ಅರ್ಹತಾ ಅವೀ. | ನೋಂದಣಿ ದಿನಾಂಕದಿಂದ 3 (ಮೂರು) ವರ್ಷಗಳು |
| 5 | ಒಂದು ಒಬೋಪೆ ಥೈಲಿಯನ್ನು ಬಳಸದೇ ಇದ್ದರೆ ಅನುಮತಿಸಲಾಗಿರುವ ಗರಿಷ್ಠ ಅವಧಿ | ನೋಂದಣಿಯಾದ ದಿನಾಂಕದಿಂದ12 (ಹನ್ನೆರಡು) ತಿಂಗಳುಗಳು |

## 6. ಥೈಲಿ ತುಂಬುವುದು – ಬಳಸುವುದು

1. ಪ್ರಸ್ತುತ, ನಮ್ಮ ಬಳಕೆದಾರರಿಗೆ ನಮ್ಮ ಸೇವೆಯನ್ನು ಬಳಸಲು ಯಾವುದೇ ಶುಲ್ಕವನ್ನು ವಿಧಿಸುತ್ತಿಲ್ಲ.
2. ನಾವು ನಮ್ಮ ಬಳಕೆದಾರರಿಗೆ ಭವಿಷ್ಯದಲ್ಲಿ ಶುಲ್ಕ ವಿಧಿಸಲು ಆರಂಭಿಸುವ ಹಕ್ಕನ್ನು ಕಾಯ್ದಿರಿಸಿದ್ದೇವೆ. ಭವಿಷ್ಯದಲ್ಲಿ ಅಂಥ ಯಾವುದೇ ಶುಲ್ಕವನ್ನು ವಿಧಿಸುವುದಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ಷರತ್ತುಗಳನ್ನು ಇದೇ 6ನೇ ಕಂಡಿಕೆಯಡಿಯಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ ನಂತರ ಅದೇ ದಿನಾಂಕದಿಂದ ಅದರ ನಿಯಮಗಳು ಮತ್ತು ಷರತ್ತುಗಳು ಜಾರಿಗೆ ಬರುತ್ತವೆ.

## 7. ಥೈಲಿ ತುಂಬುವುದು ಮತ್ತು ಬಳಸುವುದು – ನಿಯಮಗಳು ಮತ್ತು ಅಧಿಕೃತ ವ್ಯವಹಾರಗಳಿಗೆ ಇರುವ ಪಾವತಿಗೆ ಮಾರ್ಗಗಳು ( ನಿಮ್ಮ ಒಬೋಪೆ ಥೈಲಿಯ ಹಣವನ್ನು ಹೇಗೆ ತುಂಬುವುದು ಮತ್ತು ವರ್ಗಾಯಿಸುವುದು)

1. ನೀವು ನಿಮ್ಮ ಒಬೇಪೆ ಥೈಲಿಗೆ ಹಣ ತುಂಬಲು ಆಯ್ಕೆ ಮಾಡಿಕೊಂಡಾಗ, ನೀವು ಬಯಸಿದ ವ್ಯವಹಾರವನ್ನು ಮಾಡಲು ನೀವು ಕೆಲವು 'ಪಾವತಿ ವಿವರಗಳ'ನ್ನು ನೀಡಬೇಕಾಗುತ್ತದೆ. ನೀವು ಅಂಥ ಪಾವತಿ ವಿವರಗಳನ್ನು ನೀಡಿದಾಗ ನೀವು ಹಾಗೆ ಮಾಡಲು ಸ್ವಯಂಪ್ರೇರಿತರಾಗಿ ಒಪ್ಪಿದ್ದೀರಿ ಎಂದರ್ಥ.
2. ನೀವು ನೀಡಬಹುದಾದ ಪಾವತಿ ವಿವರಗಳು ನಿಮ್ಮ ಅರಿವಿದ್ದಂತೆ, ಮಾಹಿತಿಯಿದ್ದಂತೆ ಮತ್ತು ವಿಶ್ವಾಸವಿದ್ದಂತೆ ನಿಜವಾಗಿಯೂ ನಿಖರವಾಗಿಯೂ ಇರಬೇಕು. ನೀವು ನೀಡುವ ಸುಳ್ಳು ಅಥವಾ ಸರಿಯಿಲ್ಲದ ವಿವರಗಳನ್ನು ನೀಡಿದರೆ ನಾವು ಯಾವುದೇ ರೀತಿ ಅದಕ್ಕೆ ಜವಾಬ್ದಾರರಲ್ಲ.
3. ನೀವು ನಿಮ್ಮ ಒಬೇಪೆ ಥೈಲಿಗೆ ಹಣ ತುಂಬುವಾಗ ನೀವು ಕಾನೂನಾತ್ಮಕವಾಗಿ ಮತ್ತು ಸಂಪೂರ್ಣವಾಗಿ ಯಾವುದೇ ಡೆಬಿಟ್, ಕ್ರೆಡಿಟ್ ಕಾರ್ಡ್ ಅಥವಾ ಬ್ಯಾಂಕಿನ ಖಾತೆಯನ್ನು ಬಳಸುವ ಅಧಿಕಾರವನ್ನು ಹೊಂದಿರುತ್ತೀರಿ, ಹಾಗೂ ಅದನ್ನು ಪ್ರತಿನಿಧಿಸುತ್ತೀರಿ ಮತ್ತು ಸಮರ್ಥಿಸುತ್ತೀರಿ.
4. ನೀವು ಯಾವ ಬ್ಯಾಂಕ್ ಖಾತೆಯಿಂದ ನಿಮ್ಮ ಥೈಲಿಗೆ ಹಣ ತುಂಬಲು ಪ್ರಯತ್ನಿಸುತ್ತೀರೋ ಆ ಖಾತೆಯಲ್ಲಿ ನಿಮ್ಮ ಯೋಜಿತ ವ್ಯವಹಾರವನ್ನು ನಡೆಸಲು ಸಾಕಷ್ಟು ಹಣವಿದೆ ಎಂದು ಪ್ರತಿನಿಧಿಸುತ್ತೀರಿ ಮತ್ತು ಸಮರ್ಥಿಸುತ್ತೀರಿ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದ್ದರಿಂದ ರದ್ದಾದ ಹಣ ತುಂಬುವ ವ್ಯವಹಾರಗಳಿಗೆ ನಮ್ಮನ್ನು ಯಾವುದೇ ರೀತಿ ಜವಾಬ್ದಾರಿಯುತರನ್ನಾಗಿಸುವಂತಿಲ್ಲ.
5. ನಿಮ್ಮಿಂದ ನಮಗೆ ಸಿಗುವ ಯಾವುದೇ ಪಾವತಿ ಸೂಚನೆಗಳಿಗೆ ಅನುಸಾರವಾಗಿ ನಾವು ಹಣವನ್ನು ಇಟ್ಟುಕೊಳ್ಳಲು, ಪಡೆಯಲು, ನೀಡಲು ನಮಗೆ ಅಧಿಕಾರವನ್ನು ಈ ಮೂಲಕ ನೀಡಿರುತ್ತೀರಿ. ಉಳಿದ ವಿಷಯಗಳಲ್ಲಿ, ನಿಮ್ಮ ಅಧಿಕಾರ ನೀಡುವಿಕೆಯಿಂದಾಗಿ ನಿಮ್ಮ ಪಾವತಿ ಸೂಚನೆಗಳಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಗೆ ಹಣ ಪಾವತಿಸುವ ಅಥವಾ ಹಣ ಪಡೆಯುವ ಅನುಮತಿಯು ನಮಗೆ ಸಿಗುತ್ತದೆ. ನಿಮ್ಮ ದೃಢೀಕರಣವು ನೀವು ನಮ್ಮೊಂದಿಗೆ ಖಾತೆಯನ್ನು ಹೊಂದಿರುವವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ನಿಮ್ಮ ಒಬೋಪೆ ಥೈಲಿಯಲ್ಲಿ/ ಇತಿಹಾಸದಲ್ಲಿ ನಿಮ್ಮ ವ್ಯವಹಾರದ ಇತಿಹಾಸವನ್ನು ನೋಡಬಹುದು. ಈ ಹಿಂದೆ ನಿಮ್ಮ ಒಬೋಪೆ ಥೈಲಿಯ ಮೂಲಕ ನಡೆಸಿದ ವ್ಯವಹಾರದ ಮೇಲೆ ನೀವು ಯಾವುದಾದರೂ ಒಂದು ಮರುಪಾವತಿ ಅಥವಾ ಹಣ ಹಿಂದಿರುಗಿಸುವ ಕೋರಿಕೆ ಮಾಡಲು ಆಶಿಸಿದರೆ, ನೀವು ಇಲ್ಲಿನ ನಿಯಮಗಳು ಮತ್ತು ಷರತ್ತುಗಳಲ್ಲಿ ಹೇಳಿರುವ ಪ್ರಕ್ರಿಯೆಯ ಮೂಲಕ ಹಾಗೆ ಮಾಡಬಹುದು.

## 8. ಥೈಲಿಗೆ ಹಣ ತುಂಬುವುದು ಮತ್ತು ಬಳಸುವುದು – ಥೈಲಿಯಿಂದ ವ್ಯಾಪಾರಿಗೆ ವರ್ಗಾವಣೆ

1. ಒಬ್ಬ ವ್ಯಾಪಾರಿಗೆ ಪಾವತಿ ಮಾಡುವಂತೆ ನಿಮ್ಮಿಂದ ನಮಗೆ ಸೂಚನೆ ಸಿಕ್ಕಾಗ, ನೀವು ನಮಗೆ ನಿಮ್ಮ ಪಾವತಿಯನ್ನು ಆ ವ್ಯಾಪಾರಿಗೆ ಮಾಡುವ ಅಧಿಕಾರವನ್ನು ಮತ್ತು ಆದೇಶವನ್ನು ನೀಡಿರುತ್ತೀರಿ. ಈ ಅಧಿಕಾರವು ನೀವು ನಮ್ಮೊಂದಿಗೆ ಒಂದು ಖಾತೆಯನ್ನು ಹೊಂದಿರುವವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ.
2. ಒಬ್ಬ ವ್ಯಾಪಾರಿಯು ನಿಮಗೆ ನೀಡಿದ ಸರಕುಗಳು ಮತ್ತು ಸೇವೆಗಳು ನಿಮಗೆ ತೃಪ್ತಿ ನೀಡಿಲ್ಲವೆಂದರೆ ನೀವು ಆ ವಿಷಯವನ್ನು ಸಂಬಂಧಿಸಿದ ವ್ಯಾಪಾರಿಗೇ ವರದಿ ಮಾಡಬೇಕೆಂದು ಸಲಹೆ ನೀಡುತ್ತೇವೆ. ನಮ್ಮ ವ್ಯಾಪಾರಿಗಳು ನೀಡುವ ಸರಕುಗಳು ಮತ್ತು ಸೇವೆಗಳಿಗೆ ನಾವು ಜವಾಬ್ದಾರರಲ್ಲವೆಂದೂ ಹಾಗೂ ಈ ವಿಷಯವಾಗಿ ವ್ಯಾಪಾರಿ ಮತ್ತು ಬಳಕೆದಾರರ ನಡುವೆ ನಡೆಯುವ ವಿವಾದಗಳಿಗೆ ನಮ್ಮನ್ನು ಸೇರಿಸಿಕೊಳ್ಳಲಾಗುವುದಿಲ್ಲವೆಂದು ದಯವಿಟ್ಟು ಗಮನವಿಟ್ಟುಕೊಳ್ಳಿ.

## 9. ಥೈಲಿಗೆ ಹಣ ತುಂಬುವುದು ಮತ್ತು ಬಳಸುವುದು – ಥೈಲಿಯಿಂದ ಥೈಲಿಗೆ

1. ಸೇವೆಯು ಲಭ್ಯವಿರುವುದು:
1. ಆಂಡ್ರಾಯ್ಡ್ ಆಪ್
2. ಐಓಎಸ್ ಆಪ್

3. ವಿಂಡೋಸ್ ಆಪ್

2. ವರ್ಗಾವಣೆಗೆ ಮಿತಿಗಳು

| ಪ್ರತಿ ವಹಿವಾಟಿಗೆ(ಭಾರತೀಯ ರೂಪಾಯಿಗಳಲ್ಲಿ) | | | | | |
|---|---|---|---|---|---|
| | | ಕನಿಷ್ಠ | ಗರಿಷ್ಠ | ತಿಂಗಳಿಗೆ | ವರ್ಷಕ್ಕೆ |
| ಆನ್ ಕಸ್ಟ್ ಕೆವೈಸಿ | ಪಿ2ಪಿ ಯಿಂದ ನೋಂದಾಯಿಸಿಲ್ಲದ ಫಲಾನುಭವಿಗಳಿಗೆ | 10 | 10,000 | 10,00,000 | - |
| ಆನ್ ಕಸ್ಟ್ ಕೆವೈಸಿ | ಪಿ2ಪಿ ಯಿಂದ ನೋಂದಾಯಿಸಿದ ಫಲಾನುಭವಿಗಳಿಗೆ(ಪ್ರತಿ ಫಲಾನುಭವಿಗೆ) | 10 | 1,00,000 | 10,00,000 | - |
| ಆನ್ ಕಸ್ಟ್ ಕೆವೈಸಿ | ಪಿ2ಪಿ ಯಿಂದ ಕೆವೈಸಿ ಅಲ್ಲದ ಗ್ರಾಹಕರಿಗೆ | 10 | 10,000 | 10,00,000 | - |
| ಆನ್ ಕಸ್ಟ್ ಕೆವೈಸಿ | ಪಿ2ಎಂಸಿ | 10 | 1,00,000 | 10,00,000 | - |
| ಆನ್ ಕಸ್ಟ್ ಕೆವೈಸಿ | ಸಿಲೋಡ್ | 10 | 1,00,000 | 10,00,000 | - |
| ಆನ್ ಕಸ್ಟ್ ಕೆವೈಸಿ | ಎಟಿಎಂ ಹಿಂಪಡೆತ (ಆನ್ ನೆಟ್ & ಆಫ್ ನೆಟ್) | 10 | 1,00,000 | 10,00,000 | - |
| ಆನ್ ಕಸ್ಟ್ ಕೆವೈಸಿ | ಥೈಲಿ ಮಿತಿ-ಪೂರ್ಣ ಕೆವೈಸಿ | - | 1,00,000 | - | - |
| ಆನ್ ಕಸ್ಟ್ ಕೆವೈಸಿರಹಿತ | ಥೈಲಿ ಮಿತಿ- ಕೆವೈಸಿಯಿಲ್ಲದೇ | - | 10,000 | - | - |
| ಆನ್ ಕಸ್ಟ್ ಕೆವೈಸಿರಹಿತ | ಪಿ2ಪಿ | 10 | 10,000 | 10,000 | 1,00,000 |
| ಆನ್ ಕಸ್ಟ್ ಕೆವೈಸಿರಹಿತ | ಪಿ2ಎಂಸಿ | 10 | 10,000 | 10,000 | 1,00,000 |
| ಆನ್ ಕಸ್ಟ್ ಕೆವೈಸಿರಹಿತ | ಸಿಲೋಡ್ | 10 | 10,000 | 10,000 | 1,00,000 |
| ಆನ್ ಕಸ್ಟ್ ಕೆವೈಸಿರಹಿತ | ಎಟಿಎಂ ಹಿಂಪಡೆತ(ಆನ್ ನೆಟ್ & ಆಫ್ ನೆಟ್) | 100 | 10,000 | 10,000 | 1,00,000 |

3. ಒಬೋಪೆ ಥೈಲಿಯಲ್ಲಿ ಹಣ ಕಳಿಸಲು/ಪಡೆಯಲು ನಿಯಮಗಳು:
1. ಈ ಸೇವೆಯು ಪ್ರಸ್ತುತ ಇರುವ ಒಬೋಪೆ ಬಳಕೆದಾರರಿಗೆ ಮಾತ್ರ ಲಭ್ಯವಿರುತ್ತದೆ.
2. ಒಂದು ಹಣ ಪಡೆಯುವ ಥೈಲಿಗೆ ಹಣ ಕಳಿಸುವವರ ಬಳಿ ಅಷ್ಟು ಹಣ ಲಭ್ಯವಿರಬೇಕು.
3. ಪ್ರಸ್ತುತ ಇರುವ ಒಬ್ಬ ಒಬೋಪೆ ಥೈಲಿ ಬಳಕೆದಾರರಿಂದ ಹಣ ವರ್ಗಾವಣೆ ಮಾಡಿಸಿಕೊಳ್ಳುವ ಸೌಲಭ್ಯವನ್ನು ಪಡೆಯಬೇಕೆಂದರೆ, ಅವರು ಒಬೋಪೆಯಲ್ಲಿ ಒಂದು ಥೈಲಿ ಖಾತೆಯನ್ನು ನೋಂದಾಯಿಸಿಕೊಳ್ಳಬೇಕು.
4. ಥೈಲಿಯಿಂದ ಥೈಲಿಗೆ ವರ್ಗಾವಣೆಯನ್ನು ಕೋರುವುದು:
1. ಬಳಕೆದಾರರ ಬಳಿ ಒಂದು ಚಾಲ್ತಿಯಲ್ಲಿರುವ ಒಬೋಪೆ ಖಾತೆ ಇದ್ದರೆ ಮಾತ್ರ ಒಬ್ಬ ಪ್ರಸ್ತುತ ಇರುವ ಒಬೋಪೆ ಥೈಲಿ ಬಳಕೆದಾರರಿಂದ ಥೈಲಿಯಿಂದ ಥೈಲಿಗೆ ಹಣ ವರ್ಗಾವಣೆಯನ್ನು ಒಪ್ಪಿಕೊಳ್ಳುವು ಸಾಧ್ಯವಾಗುತ್ತದೆ.
2. ಬಳಕೆದಾರರು (ಕಳಿಸುವವರು) ತಮ್ಮ ಬಳಿ ಇರುವ ಒಬೋಪೆ ಥೈಲಿಯ ಖಾತೆಯಲ್ಲಿ ಹಣವನ್ನು ಹೊಂದಿದ್ದರೆ ಥೈಲಿಯಿಂದ ಥೈಲಿಗೆ ಹಣವರ್ಗಾವಣೆಯನ್ನು ಕೋರಬಹುದು.
5. ನೀವು ನಿಮ್ಮ ಒಬೋಪೆ ಥೈಲಿಯಿಂದ ಒಬೋಪೆ ಥೈಲಿಗೆ ಹಣವರ್ಗಾವಣೆ ಮಾಡಲು ಒಪ್ಪಿದಾಗ ಈ ಕೆಳಗಿನವರನ್ನು ಹೊರತುಪಡಿಸಿ ಬೇರೆಯ ವ್ಯಕ್ತಿಗಳಿಗೆ ವರ್ಗಾಯಿಸಲು ಬರುವುದಿಲ್ಲ(ಅರ್ಹ ವರ್ಗಾವಣೆ ಪಡೆಯುವವರು):
1. ಈಗಾಗಲೇ ಬಳಕೆದಾರರಾಗಿರುವ ವ್ಯಕ್ತಿಗಳು; ಅಥವಾ

2. ಬಳಕೆದಾರರಲ್ಲದಿದ್ದರೂ ಒಂದು ಖಾತೆಯನ್ನು ಹೊಂದಲು ಅಥವಾ ಒಬೋಪೆ ಥೈಲಿಯನ್ನು ಹೊಂದಲು ಅರ್ಹರಾಗಿರುವವರು

3. ನೀವು ನೀಡುವ 9.2ರಲ್ಲಿನ ನಿಮ್ಮ ಪ್ರತಿನಿಧಿತ್ವದ ಮೇಲೆ ಸಂಪೂರ್ಣವಾಗಿ ವಿಶ್ವಾಸ ಹೊಂದಿರುತ್ತೇವೆ ಮತ್ತು ಹಣವು ಅರ್ಹರಲ್ಲದ ವರ್ಗಾವಣೆ ಪಡೆಯುವವರಿಗೆ ತಲುಪಿದ ಪಕ್ಷದಲ್ಲಿ ಅದಕ್ಕೆ ನಾವು ಜವಾಬ್ದಾರರಾಗಿರುವುದಿಲ್ಲ.

4. ಅರ್ಹರಲ್ಲದ ವರ್ಗಾವಣೆ ಪಡೆಯುವವರಿಗೆ ನಿ ಮ್ಮ ಹಣವು ವರ್ಗಾವಣೆಯಾಗಿದೆ ಎಂದು ನಂಬಲು ನಮಗೆ ಕಾರಣಗಳಿದ್ದರೆ, ನಿಮ್ಮ ಖಾತೆಯನ್ನು ಮತ್ತು ನೀವು ಹಣ ವರ್ಗಾಯಿಸಿರುವ ವ್ಯಕ್ತಿಯ ಖಾತೆಯನ್ನು ತಕ್ಷಣ ರದ್ದುಗೊಳಿಸುವ ಹಕ್ಕನ್ನು ನಾವು ಕಾಯ್ದಿರಿಸಿದ್ದೇವೆ.

## 10. ಥೈಲಿಗೆ ಹಣ ತುಂಬುವುದು ಮತ್ತು ಬಳಸುವುದು-ಮರುಪಾವತಿಗಳು(Refunds)

1. ನಿಮ್ಮ ಒಬೋಪೆ ಥೈಲಿಯಿಂದ ಕಡಿತವಾಗಿರುವ ಯಾವುದೇ ಮೊತ್ತವನ್ನು ನೀವು ಹಿಂದಿರುಗಿ ಪಡೆಯಲು ಬಯಸಿದರೆ, ಎಲ್ಲಾ ಪ್ರಕರಣಗಳಲ್ಲಿಯೂ ನಿಮ್ಮ ಮಾನವ ಸಂಪನ್ಮೂಲ ತಂಡವನ್ನು ಸಂಪರ್ಕಿಸಿ (ನಿಮ್ಮದು ಕಾರ್ಪೋರೆಟ್ ಗ್ರಾಹಕರಾಗಿದ್ದರೆ) ಮತ್ತು ಬೇರಾವುದೇ ಪ್ರಕರಣದಲ್ಲಿ obopaysupport@obopay.com ಗೆ ಮಾಹಿತಿ ನೀಡಿ. ನೀವು ನೇರವಾಗಿ ಒಬ್ಬ ವ್ಯಾಪಾರಿಗೆ ಮಾಡುವ ಪಾವತಿಯನ್ನೂ ಸೇರಿದಂತೆ ನೀವು ಮಾಡುವ ಯಾವುದೇ ಮರುಪಾವತಿ ವಿನಂತಿಗಳನ್ನು ನಾವೇ ಕಾರ್ಯರೂಪಕ್ಕೆ ತರಬೇಕು.

2. ನಾವು ಒಂದು ಮರುಪಾವತಿ ವಿನಂತಿಯು ಅರ್ಹವಾದುದೆಂದು ತೀರ್ಮಾನಿಸಿದರೆ, ನಿಮ್ಮ ಮರುಪಾವತಿ ಬೇಡಿಕೆಯನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಸಮರ್ಥನೀಯ ಯತ್ನವನ್ನು ಮಾಡಿ ಆ ಹಣವನ್ನು ನಿಮ್ಮ ಥೈಲಿಗೆ ಹಿಂದಿರುಗಿಸಲು ಪ್ರಯತ್ನಿಸುತ್ತೇವೆ. 3. ಆದರೆ ಆರ್ ಬಿ ಐ ನಿಬಂಧನೆಗಳು ನಿಮ್ಮ ಒಬೋಪೆ ಥೈಲಿಯಲ್ಲಿನ ಬಾಕಿ ಹಣವನ್ನು ನಿಮಗೆ ಹಿಂದಿರುಗಿಸಲು ಅನುಮತಿಸುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ. ನೀವು ನಿಮ್ಮ ಒಬೋಪೆ ಥೈಲಿಯಿಂದ ನಿಮ್ಮ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಯಿಸಬಹುದು. ಅಂಥ ಯಾವುದೇ ಥೈಲಿಯಿಂದ ಬ್ಯಾಂಕಿಗೆ ಮಾಡುವ ವರ್ಗಾವಣೆಯನ್ನು ಮರುಪಾವತಿ ಅಥವಾ ಹಣ ಹಿಂಪಡೆತ ಎಂದು ಪರಿಗಣಿತವಾಗುವುದಿಲ್ಲ.

4. ನಾವು ಸಾಕಷ್ಟು ಸಮರ್ಥನೀಯ ಯತ್ನವನ್ನು ಮಾಡಿ ಆದಷ್ಟು ಬೇಗ ನಿಮ್ಮ ಮರುಪಾವತಿ ಬೇಡಿಕೆಯನ್ನು ಕಾರ್ಯರೂಪಕ್ಕೆ ತರುತ್ತೇವೆ. ಆದರೆ ನಿಮ್ಮ ಮರುಪಾವತಿ ಬೇಡಿಕೆಯ ಪ್ರಕ್ರಿಯೆಯಲ್ಲಿರುವಾಗ ನಾವು ವಿಶ್ವಾಸವಿಟ್ಟಿರುವ ಮೂರನೇ ವ್ಯಕ್ತಿಗಳಾದ ಬ್ಯಾಂಕುಗಳು ಮತ್ತು ವ್ಯಾಪಾರಿಗಳಂಥವರಿಂದ ಆಗಬಹುದಾದ ವಿಳಂಬಕ್ಕೆ ನಾವು ಜವಾಬ್ದಾರರಲ್ಲ ಎಂಬುದನ್ನು ದಯವಿಟ್ಟು ಗಮನಿಸಿ. ಮೂರನೇ ವ್ಯಕ್ತಿಗಳು ಸಾಮಾನ್ಯವಾಗಿ ನಿಮ್ಮ ಮರುಪಾವತಿಯನ್ನು ಮಾಡಲು 2ರಿಂದ 3 ಕೆಲಸದ ದಿನಗಳನ್ನು ತೆಗೆದುಕೊಳ್ಳುತ್ತವೆ.

## 11. ಥೈಲಿಗೆ ಹಣ ತುಂಬುವುದು ಮತ್ತು ಬಳಸುವುದು-Chargeback

1. ನಿಮ್ಮ ಡೆಬಿಟ್ ಕಾರ್ಡು ಅಥವಾ ಕ್ರೆಡಿಟ್ ಕಾರ್ಡಿನ ಯೋಜನೆಯ ನಿಯಮಗಳು ಮತ್ತು ಷರತ್ತುಗಳ ಅನ್ವಯ ಒಂದು ಚಾರ್ಜ್ ಬ್ಯಾಕನ್ನು ಕೋರುವ ಹಕ್ಕು ನಿಮಗಿರಬಹುದು. ನಿಮ್ಮ ಚಾರ್ಜ್ ಬ್ಯಾಕ್ ಕೋರಿಕೆಯನ್ನು ನಿಮ್ಮ ಡೆಬಿಟ್/ಕ್ರೆಡಿಟ್ ಕಾರ್ಡು ನೀಡುವವರು ಕಾರ್ಯರೂಪಕ್ಕೆ ತರಬೇಕೇ ಹೊರತು ನಾವಲ್ಲ. ಆದ್ದರಿಂದ ನಿಮ್ಮ ಚಾರ್ಜ್ ಬ್ಯಾಕ್ ಕೋರಿಕೆಗಳ ಪ್ರಕ್ರಿಯೆಯನ್ನು ನಡೆಸುವುದರ ಬಗ್ಗೆ ನಾವು ಜವಾಬ್ದಾರರಲ್ಲ.

2. ಆರ್ ಬಿ ಐ ನಿಬಂಧನೆಗಳಿಗೆ ಬದ್ಧರಾಗಿರಲು, ನಾವು ನಿಮ್ಮ ಚಾರ್ಜ್ ಬ್ಯಾಕ್ ಕೋರಿಕೆಗೆ ಸಂಬಂಧಿಸಿದಂತೆ, ನಿಮಗೆ ಮೋಸವಾಗಿರುವುದನ್ನು ನಿರ್ಧರಿಸಲು, ಖಾತೆ ಮತ್ತು ವ್ಯವಹಾರ ಇತಿಹಾಸವನ್ನು ಪರಾಮರ್ಶಿಸುವ ಹಕ್ಕನ್ನು ಕಾಯ್ದಿರಿಸಿದ್ದೇವೆ. ನಿಮ್ಮ ಖಾತೆಯಲ್ಲಿ ಮೋಸದ ಚಟುವಟಿಕೆ ನಡೆದಿದೆ ಎಂದು ನಂಬಲು ಕಾರಣವಿದೆ ಎನಿಸಿದರೆ ನಾವು ನಿಮ್ಮ ಖಾತೆಯನ್ನು ತಕ್ಷಣ ರದ್ದುಗೊಳಿಸುವ ಹಕ್ಕನ್ನು ನಾವು ಕಾಯ್ದಿರಿಸಿದ್ದೇವೆ.

## 12. ಥೈಲಿಗೆ ಹಣ ತುಂಬುವುದು ಮತ್ತು ಬಳಸುವುದು – ಅನುಮಾನಾಸ್ಪದ ಶುಲ್ಕಗಳು ಮತ್ತು ವ್ಯವಹಾರಗಳು

1. ನಿಮ್ಮ ಖಾತೆಯಲ್ಲಿ ಮಾಡಲಾದ ಯಾವುದಾದರೂ ಪಾವತಿ ಸೂಚನೆಗಳು ಮೋಸದಿಂದ ಮಾಡಲ್ಪಟ್ಟಿವೆ ಎಂದು ನಾವು ನಂಬಲು ಕಾರಣವಿದ್ದರೆ, ನಿಮ್ಮ ಖಾತೆಯನ್ನು ಅಮಾನತ್ತುಗೊಳಿಸುತ್ತೇವೆ ಮತ್ತು ಆರ್ ಬಿ ಐ ನಿಬಂಧನೆಗಳಿಗೆ ಮತ್ತು ಅನ್ವಯವಾಗುವ ಕಾನೂನುಗಳಿಗೆ ಅನುಸಾರವಾಗಿ ನಿಮ್ಮ ಖಾತೆಯನ್ನು ತನಿಖೆ ಮಾಡಲು ಮತ್ತು ಅನುಮಾನಾಸ್ಪದ ಚಟುಪಟಿಕೆಯನ್ನು ವರದಿ ಮಾಡಲು ನಿಮ್ಮ ಖಾತೆಯನ್ನು ಬಳಸದಂತೆ ತಡೆಯುತ್ತೇವೆ. ಅಂಥ ಅಮಾನತ್ತು ತನಿಖೆ ಮುಗಿಯುವವರೆಗೆ ಜಾರಿಯಲ್ಲಿರುತ್ತದೆ.

2. ತನಿಖೆಯನ್ನು ನಡೆಸುವಾಗ ನಾವು ಹಲವಾರು ಬ್ಯಾಂಕುಗಳು ಮತ್ತು ವ್ಯಾಪಾರಿಗಳಂಥ ಮೂರನೇ ವ್ಯಕ್ತಿಗಳ ಮೇಲೆ ವಿಶ್ವಾಸವಿರಿಸಿರುತ್ತೇವೆ ಎಂಬುದನ್ನು ಗಮನಿಸಿ. ಹಾಗಿದ್ದೂ, ನಾವು ತನಿಖೆಯು ಆದಷ್ಟೂ ಬೇಗ ಮುಗಿಯಲೆಂದು ಸಮರ್ಥ ಪ್ರಯತ್ನವನ್ನು ಮಾಡುತ್ತೇವೆ.

3. ತನಿಖೆಯು ಪೂರ್ಣವಾದಾಗ ಮತ್ತು ಅದರ ಫಲಿತಾಂಶಗಳ ಆಧಾರದ ಮೇಲೆ, ನಾವು ನಿಮ್ಮ ಖಾತೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಾಡಬೇಕಾಗಬಹುದು.

## 13. ಥೈಲಿಗೆ ಹಣ ತುಂಬುವುದು ಮತ್ತು ಬಳಸುವುದು – ಕೊಂಡಿಗಳು

1. ನಮ್ಮ "ಅಧಿಕೃತ ಜಾಲತಾಣ" ವು https://www.obopay.com ಇಲ್ಲಿ ಲಭ್ಯವಿರುತ್ತದೆ. ನಮ್ಮ ಅಧಿಕೃತ ಜಾಲತಾಣ ಪುಟದ ಪ್ರತಿಯೊಂದು ಪುಟವೂ https:// ಎಂದು ಆರಂಭವಾಗಿರುತ್ತದೆ. ಇನ್ನೊಂದು ರೀತಿ ಹೇಳಬೇಕೆಂದರೆ, ನಮ್ಮ ಅಧಿಕೃತ ಜಾಲತಾಣ ಪುಟದ ಪ್ರತಿ ಜಾಲಪುಟವೂ ಹೈಪರ್ ಟೆಕ್ಸ್ಟ್ ಟ್ರಾನ್ಸ್ ಫರ್ ಪ್ರೋಟೋಕಾಲ್ ರಕ್ಷಣೆಗೊಳಪಟ್ಟಿದೆ("HTTPS ಚಾಲಿತ") ಅಥವಾ "ಪರಿಶೀಲಿತ ಗುರುತು" ಇದೆ.

2. ನಾವು ನಮ್ಮ ಇಡೀ ಅಧಿಕೃತ ಜಾಲತಾಣವನ್ನು ನಕಲಿ ಜಾಲತಾಣಗಳ ವಿರುದ್ಧ ರಕ್ಷಣೆಗೆಂದು HTTPS ಚಾಲಿತ ಮಾಡಿದ್ದೇವೆ. ಯಾವುದೇ ಮಾಹಿತಿಯನ್ನು ನೀವು ನೀಡುವ ಮೊದಲು ದಯವಿಟ್ಟು ಜಾಲತಾಣ ಪುಟವು HTTPS ಚಾಲಿತವಾಗಿದೆಯೇ ಎಂದು ಪರೀಕ್ಷಿಸಿ. ನಕಲಿ ಜಾಲತಾಣಗಳೂ ಸೇರಿದಂತೆ ಮೂರನೇ ವ್ಯಕ್ತಿಯ ಜಾಲತಾಣ ಪುಟದಲ್ಲಿ ನೀವು ಮಾಹಿತಿಗಳನ್ನು ನೀಡಿ ಉಂಟಾಗುವ ಪರಿಣಾಮಗಳ ಬಗ್ಗೆ ನಾವು ಜವಾಬ್ದಾರರಲ್ಲ.
3. ಯಾವುದೇ ಮೂರನೇ ವ್ಯಕ್ತಿಯ ಜಾಲತಾಣಗಳ ಹಾಗೂ ನಮ್ಮ ಅಧಿಕೃತ ಜಾಲತಾಣಪುಟದಲ್ಲಿ ಲಭ್ಯವಿರುವ ಮೂರನೇ ವ್ಯಕ್ತಿಯ ಜಾಲತಾಣ ಬಗೆಗಿನ ಸುರಕ್ಷತೆ, ಕಾರ್ಯನಿರ್ವಹಿಸುವಿಕೆ ಅಥವಾ ಲಭ್ಯತೆಯ ಬಗ್ಗೆ ನಾವು ಯಾವುದೇ ಖಾತರಿ ನೀಡುವುದಿಲ್ಲ.

## 14. ಥೈಲಿಯನ್ನು ಮುಚ್ಚುವುದು ಮತ್ತು ಅವಧಿ ಮುಕ್ತಾಯ – ಖಾತೆಯನ್ನು ಸ್ಥಗಿತಗೊಳಿಸುವುದು

1. ನಾವು ನಿಮಗೆ ನೀಡಿರುವ ಸೇವೆಗಳನ್ನು ಯಾವುದೇ ಮುನ್ಸೂಚನೆಯನ್ನೂ ನೀಡದೆ, ಆಂತರಿಕ ನೀತಿಯಲ್ಲಿನ ಬದಲಾಮಣೆಯಿಂದಾಗಿ, ಅಥವಾ ಆರ್ ಬಿ ಐ ನಿಬಂಧನೆಗಳಿಂದಾಗಿ ಅಥವಾ ಇನ್ನಾವುದಾದರೂ ಅನ್ವಯಿಸುವ ಕಾನೂನುಗಳಿಂದಾಗಿ ಬದಲಾಯಿಸುವ, ಸ್ಥಗಿತಗೊಳಿಸುವ ಅಥವಾ ಅಮಾನತುಗೊಳಿಸುವ ಹಕ್ಕನ್ನು ಕಾಯ್ದಿರಿಸಿದ್ದೇವೆ.
2. ನೀವು ಯಾವುದೇ ಸಮಯದಲ್ಲಿ ಸೇವೆಗಳನ್ನು ನಿಲ್ಲಿಸಲು ಅಧಿಕೃತ ಜಾಲತಾಣದಲ್ಲಿ ಒಂದು ಕೋರಿಕೆ ಸಲ್ಲಿಸಬಹುದು. ನಾವು ನಿಮ್ಮ ಕೋರಿಕೆಯನ್ನು ಮನ್ನಿಸಿ ಆದಷ್ಟೂ ಬೇಗ ನಿಮಗೆ ನೀಡುತ್ತಿರುವ ಸೇವೆಗಳನ್ನು ಸ್ಥಗಿತಗೊಳಿಸಲು ಪ್ರಯತ್ನಿಸುತ್ತೇವೆ.
3. ನಿಮ್ಮ ಖಾತೆಯನ್ನು ಸ್ಥಗಿತಗೊಳಿಸುವ ಮುನ್ನ ನಡೆಸಿದ ಎಲ್ಲಾ ವ್ಯವಹಾರಗಳಿಗೆ ನೀವೆ ಜವಾಬ್ದಾರಿಯಾಗಿರುತ್ತೀರಿ.
4. ಆರ್ ಬಿ ಐ ನಿಬಂಧನೆಗಳಡಿಯಲ್ಲಿ, ನಿಮಗೆ ನೀಡುವ ಸೇವೆಗಳನ್ನು ನಿಲ್ಲಿಸಿದ ದಿನಾಂಕದಂದು ಉಳಿದಿರುವ ಬಾಕಿ ಹಣವನ್ನು ನಿಮಗೆ ಹಿಂದಿರುಗಿಸುವುದನ್ನು ನಿಷೇಧಿಸಲಾಗಿದೆ.

## 15. ಥೈಲಿಯನ್ನು ಮುಚ್ಚುವುದು ಮತ್ತು ಅವಧಿ ಮುಕ್ತಾಯ – ಒಬೋಪೆ ಥೈಲಿಯ ಅವಧಿ ಮುಕ್ತಾಯ

1. ನಿಮ್ಮ ಒಬೋಪೆಯ "ಅವಧಿ ಮುಕ್ತಾಯ" ವಾಗುವುದು ಕೆಳಗಿನ ಸಂದರ್ಭಗಳಲ್ಲಿ:
1. ನೀವು ಒಂದು ಖಾತೆಗೆ ಯಶಸ್ವಿಯಾಗಿ ನೋಂದಾಯಿಸಿಕೊಂಡ ದಿನಾಂಕದಿಂದ 3(ಮೂರು) ವರ್ಷಗಳ ಅವಧಿ ಮುಗಿದಾಗ.;
2. ನೀವು ಒಂದು ಖಾತೆಗೆ ಯಶಸ್ವಿಯಾಗಿ ನೋಂದಾಯಿಸಿಕೊಂಡ ದಿನಾಂಕದಿಂದ ಮೊದಲ ಬಾರಿ ಸೇವೆಗಳನ್ನು ಉಪಯೋಗಿಸುವ ನಡುವೆ 360(ಮೂರುನೂರಾ ಅರವತ್ತು) ದಿನಗಳು ಪೂರ್ಣಗೊಂಡರೆ; ಅಥವಾ
3. ಕಳೆದ ಬಾರಿ ಸೇವೆಗಳನ್ನು ಉಪಯೋಗಿಸಿ 180(ಒಂದು ನೂರಾ ಎಂಬತ್ತು) ದಿನಗಳು ಪೂರ್ಣಗೊಂಡಿದ್ದರೆ
2. ನಿಮ್ಮ ನೋಂದಾಯಿತ ಇ-ಮೆಯಿಲ್ ವಿಳಾಸಕ್ಕೆ/ನೋಂದಾಯಿತ ದೂರವಾಣಿ ಸಂಖ್ಯೆಗೆ ನಿಮ್ಮ ಒಬೋಪೆ ಥೈಲಿಯ ಅವಧಿ ಮುಗಿಯುವ 45(ನಲವತ್ತೈದು) ದಿನಗಳ ಮುನ್ನ ನಿಮಗೆ ಮಾಹಿತಿ ನೀಡಲಾಗುತ್ತದೆ.
3. ಅವಧಿ ಮುಗಿದ ದಿನದಂದು ನಿಮ್ಮ ಖಾತೆಯನ್ನು 'ಮುಚ್ಚಿದೆ' ಎಂದು ಪರಿಗಣಿಸಲಾಗುತ್ತದೆ ಹಾಗು ನಿಮ್ಮ ಒಬೋಪೆ ಥೈಲಿಯಲ್ಲಿ ಉಳಿದಿರುವ ಬಾಕಿ ಮೊತ್ತವನ್ನು ನಿಮ್ಮ ಲಿಖಿತ ಕೋರಿಕೆಯ ಆಧಾರದಲ್ಲಿ ನಿಮಗೆ ಮರುಪಾವತಿ ಮಾಡಲಾಗುವುದು ಮತ್ತು ಅಂಥ ಮರುಪಾವತಿಯನ್ನು ನಿಮ್ಮ ಪರಿಶೀಲಿತ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು ಎಂದು ದಯವಿಟ್ಟು ಗಮನಿಸಿ. ಈ ಮರುಪಾವತಿಯನ್ನು ನೀವು ಅವಧಿ ಮುಗಿದ ದಿನಾಂಕದಿಂದ 3 ವರ್ಷಗಳ ಒಳಗೆ ನಿಮ್ಮ ಹಣವನ್ನು ಕ್ಲೇಮು ಮಾಡದಿದ್ದರೆ ನೀವು ನಿಮ್ಮ ಒಬೋಪೆ ಥೈಲಿಯಲ್ಲಿನ ಬಾಕಿ ಹಣವನ್ನು ತ್ಯಜಿಸಿರುತ್ತೀರಿ.

## 16. ಇತರೆ – ಬಳಕೆದಾರರ ನಡತೆ

1. ಪ್ರತಿ ಬಳಕೆದಾರರೂ ಕೆಳಗಿನವುಕ್ಕೆ ಒಪ್ಪಿಕೊಂಡಿರಬೇಕು:
1. ಅವರು ಈಗಲೂ ಮುಂದೆಯೂ ಯಾವುದೇ ಮೂರನೇ ವ್ಯಕ್ತಿಯ ವೈಚಾರಿಕ ಆಸ್ತಿಯನ್ನು, ವಾಣಿಜ್ಯ ರಹಸ್ಯವನ್ನು, ಮಾಲೀಕತ್ವದ ಹಕ್ಕುಗಳನ್ನು, ಪ್ರಚಾರದ ಅಥವಾ ಖಾಸಗೀತನದ ಹಕ್ಕುಗಳನ್ನು ಅತಿಕ್ರಮಿಸುವುದಿಲ್ಲ;
2. ಅವರು ನಮ್ಮ ಜೊತೆ ಅಥವಾ ಬೇರೆಯ ಬಳಕೆದಾರರ ಜೊತೆ ಮಾನನಷ್ಟ ಉಂಟು ಮಾಡುವ, ಅವಮಾನ ಮಾಡುವ, ಕಾನೂನು ಬಾಹಿರವಾಗಿ ಬೆದರಿಸುವ ಅಥವಾ ಕಾನೂನುಬಾಹಿರವಾಗಿ ಕಿರುಕುಳ ನೀಡುವ ರೀತಿ ಸಂವಹಿಸುವುದಿಲ್ಲ;
3. ಅವರು ನಮ್ಮ ಜೊತೆ ಅಥವಾ ಬೇರೆಯ ಬಳಕೆದಾರರ ಜೊತೆ ಅಸಭ್ಯತೆಯಿಂದ, ಅಶ್ಲೀಲವಾಗಿ ಸಂವಹಿಸುವುದಿಲ್ಲ;
4. ಅವರು ನಮ್ಮ ಜೊತೆ ಅಥವಾ ಬೇರೆಯ ಬಳಕೆದಾರರ ಜೊತೆ ಸರ್ಕಾರಿ ವಿರೋಧಿಯಾಗಿ, ನಿಂದನಾತ್ಮಕವಾಗಿ, ಬೈಗುಳಾತ್ಮಕವಾಗಿ, ಜನಾಂಗೀಯ, ಸಾಂಸ್ಕೃತಿಕವಾಗಿ ಅಥವಾ ಧಾರ್ಮಿಕ ದ್ವೇಷವನ್ನು ಹುಟ್ಟು ಹಾಕುವಂತಹ ಬೇಧ ಭಾವ ತೋರಿಸುವ, ಕೀಟಲೆ ಮಾಡುವ, ಕಿರುಕುಳ ಕೊಡುವ, ಹಗರಣ ಸೃಷ್ಟಿಸುವ, ದ್ವೇಷ ಹುಟ್ಟಿಸುವ ಅಥವಾ ದೈವ ನಿಂದನೆಯೆನಿಸುವ ಸಂವಹನವನ್ನು ನಡೆಸುವುದಿಲ್ಲ;
5.ಅವರು ಅಪರಾಧವೆನಿಸುವ ಯಾವುದೇ ತಪ್ಪು ನಡತೆಯೆನಿಸುವ ಕ್ರಿಯೆಯಲ್ಲಿ ತೊಡಗುವ, ಸಾರ್ವಜನಿಕ ನಷ್ಟವನ್ನು ಉಂಟು ಮಾಡುವ ಅಥವಾ ಕಾನೂನಿಗೆ ಯಾವುದೇ ರೀತಿ ವಿರುದ್ಧವಾಗಿ ಹೋಗುವ ಕ್ರಿಯೆಯಲ್ಲಿ ತೊಡಗುವುದಿಲ್ಲ ಮತ್ತು/ಅಥವಾ ಉತ್ತೇಜಿಸುವುದಿಲ್ಲ;
6. ಅವರು ತಾಂತ್ರಿಕವಾಗಿ ಹಾನಿಯಾಗುವ (ಕಂಪ್ಯೂಟರ್/ಮೊಬೈಲ್ ವೈರಸ್ ಗಳನ್ನು, ಲಾಜಿಕ್ ಬಾಂಬ್ ಗಳು, ಟ್ರೋಜನ್ ಹಾರ್ಸ್ ಗಳು, ವರ್ಮ್ ಗಳು, ಹಾನಿಕಾರಕ ಭಾಗಗಳು, ದೋಷಪೂರಿತ ದತ್ತಾಂಶ ಅಥವಾ ಇತರೆ ಕೆಟ್ಟ ತಂತ್ರಾಂಶ ಗಳು ಅಥವಾ ಹಾನಿಕಾರಕ ದತ್ತಾಂಶಗಳು ಅಥವಾ ಇತರೆ ಸಂಕೇತಗಳು ಮತ್ತು ಕಡತಗಳು ಮುಂತಾದ ಯಾವುದೇ ಅಂಶಗಳನ್ನೂ ಒಳಗೊಂಡಂತೆ), ಯಾವುದೇ ಅಂಶವನ್ನು ಹರಡುವುದಿಲ್ಲ ಅಥವಾ ನಿರ್ಧಾರಿತವಾಗಿ ನಾಶಮಾಡುವ, ಹಾನಿಯುಂಟುಮಾಡುವ, ಮಿತಿ ಹೇರುವ, ತಡೆಯೊಡ್ಡುವ, ಮಧ್ಯಪ್ರವೇಶಿಸುವ, ಮೌಲ್ಯವನ್ನು ಕ್ಷೀಣಿಸುವ, ಒಳಗೊಳಗೇ ಮಧ್ಯಪ್ರವೇಶಿಸುವ ಅಥವಾ ಯಾವುದೇ ವ್ಯವಸ್ಥೆಯ ಕಾರ್ಯತತ್ಪರತೆಯನ್ನು, ದತ್ತಾಂಶವನ್ನು ಅಥವಾ ವೈಯಕ್ತಿಕ ಮಾಹಿತಿಯನ್ನು ಹಾಳು ಮಾಡುವ,

ಕಂಪ್ಯೂಟರ್ ಪ್ರೋಗ್ರಾಮುಗಳನ್ನು, ಹಾನಿ ಮಾಡುವ ಅಂಶಗಳನ್ನು ಹರಡುವುದಿಲ್ಲ;
7. ಅವರು ಗುಡ್ ವಿಲ್ ಆಗಲಿ ಅಥವಾ ವ್ಯವಹಾರದಲ್ಲಾಗಲೀ (ಸಂಪೂರ್ಣವಾಗಿ ಅಥವಾ ಆಂಶಿಕವಾಗಿ) ನಮಗೆ ನಷ್ಟವುಂಟು ಮಾಡುವುದಿಲ್ಲ ಅಥವಾ ನಷ್ಟವುಂಟಾಗುವಂತೆ ಮಾಡುವುದಿಲ್ಲ; ಮತ್ತು
8. ನಮ್ಮ ಜೊತೆ ಅಥವಾ ಇತರ ಬಳಕೆದಾರರ ಜೊತೆ ಅವರ ಸಂವಹನವು ರಾಜಕೀಯ ಪ್ರಚಾರವಾಗಲಿ, ಅನಪೇಕ್ಷಿತ ಅಥವಾ ಅನಧಿಕೃತ ಜಾಹೀರಾತು, ಉತ್ತೇಜನಕಾರಿಯಾಗಿ ಮತ್ತು/ಅಥವಾ ವಾಣಿಜ್ಯ ಕೋರಿಕೆಗಳನ್ನಾಗಲಿ, ಚೈನ್ ಕಾಗದಗಳು, ಪಿರಮಿಡ್ ಯೋಜನೆಗಳು, ಸಮೂಹ ಮೆಯಿಲ್ ಮಾಡುವುದು ಮತ್ತು/ಅಥವಾ ಯಾವುದೇ ರೀತಿಯ ಸ್ಪ್ಯಾಮ್ ಅಥವಾ ಪ್ರಚಾರಗಳನ್ನು ಒಳಗೊಂಡಿರುವುದಿಲ್ಲ.

## 17. ಇತರೆ – ಸಂವಹನ ಮತ್ತು ಸೂಚನೆಗಳು

1. ನೀವು ಯಶಸ್ವಿಯಾಗಿ ಒಂದು ಖಾತೆಯನ್ನು ನಮ್ಮೊಂದಿಗೆ ನೋಂದಾಯಿಸುವುದರ ಮೂಲಕ, ನಮ್ಮಿಂದ ನಿಮ್ಮ ನೋಂದಾಯಿತ ದೂರವಾಣಿ ಸಂಖ್ಯೆಗೆ ಮತ್ತು ನಿಮ್ಮ ನೋಂದಾಯಿತ ಇ-ಮೆಯಿಲ್ ವಿಳಾಸಕ್ಕೆ ನಮ್ಮ ಸೇವೆಗಳ ಬಗ್ಗೆ ಸಂವಹನವನ್ನು ಪಡೆಯಲು ಒಪ್ಪಿರುತ್ತೀರಿ. ಹಾಗೆ ನೀವು ಪಡೆಯುವ ನಮ್ಮ ಸಂವಹನವು ಯಾವುದೇ ಸ್ಪ್ಯಾಮ್, ಅನಪೇಕ್ಷಿತ ಸಂವಹನ ಅಥವಾ ರಾಷ್ಟ್ರೀಯ 'ಡು ನಾಟ್ ಡಿಸ್ಟರ್ಬ್ ರಿಜಿಸ್ಟರಿಯ' ನೋಂದಣಿಯನ್ನು ಅತಿಕ್ರಮಿಸಿದಂತಾಗುವುದಿಲ್ಲ ಎಂದು ಒಪ್ಪಿರುತ್ತೀರಿ.
2. ಈ ಸೂಚನೆಗಳು ಮತ್ತು ಷರತ್ತುಗಳ ಸಂಬಂಧ ಯಾವುದೇ ಸೂಚನೆ ಅಥವಾ ಅಧಿಸೂಚನೆಯನ್ನು ನೀವು ನಮಗೆ ಹೇಳಲು ಬಯಸಿದರೆ ಬರವಣಿಗೆ ರೂಪದಲ್ಲಿ ಕೆಳಗೆ ಸೂಚಿಸಿರುವಲ್ಲಿಗೆ ಕಳುಹಿಸಿ:
ಗಮನಿಸಿ: ಗ್ರಾಹಕ ರಕ್ಷಣಾ ವಿಭಾಗ, ಒಬೋಪೆ
ವಿಳಾಸ: #150, 6ನೇ ಮಹಡಿ, ಟವರ್ ಸಿ, ಡೈಮಂಡ್ ಡಿಸ್ಟ್ರಿಕ್ಟ್, ಹಳೆಯ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು– 560008, ಕರ್ನಾಟಕ

## 18. ಇತರೆ - ನಷ್ಟಪರಿಹಾರ

1. ಈ ನಿಯಮಗಳು ಮತ್ತು ಷರತ್ತುಗಳನ್ನು ನೀವು ನಮ್ಮ ಸೇವೆಗಳನ್ನು ಬಳಸುವ ಅಥವಾ ದುರ್ಬಳಕೆ ಮಾಡುವ ಅಥವಾ ಅವುಗಳನ್ನು ಮೀರುವುದರಿಂದ ಆಗಬಹುದಾದ ನಷ್ಟಗಳನ್ನು ಭರಿಸುವ, ನಮ್ಮನ್ನು ಮತ್ತು/ಅಥವಾ ಸಂಬಂಧಿತ ವ್ಯಕ್ತಿಗಳಿಗೆ ಹಕ್ಕು ಸ್ಥಾಪನೆಗಳಿಂದ, ನಷ್ಟಗಳಿಂದ, ಹಾನಿಗಳಿಂದ, ಹೊರೆಗಳಿಂದ, ಖರ್ಚುಗಳಿಂದ ಮತ್ತು ದರಗಳಿಂದ ತೊಂದರೆಯಾಗದಂತೆ ರಕ್ಷಿಸುವ ಮತ್ತು ಯಾವುದೇ ಕಾನೂನು ಶುಲ್ಕ ಮತ್ತು ಖರ್ಚುಗಳನ್ನು ಹೊರತು ಪಡಿಸದಂತೆ ಭರಿಸಲು ಒಪ್ಪಿರುತ್ತೀರಿ.

## 19. ಇತರೆ – ಆಡಳಿತಾತ್ಮಕ ಕಾನೂನು ಮತ್ತು ವ್ಯಾಜ್ಯ ತೀರ್ಮಾನ

1. ಈ ನಿಯಮಗಳು ಮತ್ತು ಷರತ್ತುಗಳಿಂದ ಅಥವಾ ಇವಕ್ಕೆ ಸಂಬಂಧಿಸಿದಂತೆ ಹುಟ್ಟಬಹುದಾದ ಯಾವುದೇ ವಿವಾದ ಅಥವಾ ಹಕ್ಕು ಸ್ಥಾಪನೆಯ ವಿಷಯಗಳನ್ನು ಬಗೆಹರಿಸಿಕೊಳ್ಳಲು ಭಾರತೀಯ ಆರ್ಬಿಟ್ರೇಶನ್ & ಕನ್ಸಿಲಿಯೇಶನ್ ಆಕ್ಟ್, 1996ರಲ್ಲಿರುವ ಅವಕಾಶಗಳಿಗೆ ಅನುಗುಣವಾಗಿ ಬದ್ಧವಾಗಿರುವ ನಿಯಮಗಳಿಗೆ ಬದ್ಧರಾಗಿ ಬಗೆಹರಿಸಿಕೊಳ್ಳಲು ಬಯಸುತ್ತೇವೆ. ಅಂಥ ಯಾವುದೇ ವಿವಾದಗಳು ಅಥವಾ ಹಕ್ಕುಸಾಧನೆಗಳನ್ನು ಕುರಿತು ತೀರ್ಮಾನಿಸುವಾಗ ಪ್ರತ್ಯೇಕವಾಗಿಯೇ ಪರಿಗಣಿಸಲಾಗುವುದು ಮತ್ತು ಬೇರೆ ವ್ಯಕ್ತಿಯ ಬೇರೊಂದು ವಿವಾದ ಅಥವಾ ಹಕ್ಕುಸ್ಥಾಪನೆಯನ್ನು ಗಮದಲ್ಲಿಟ್ಟುಕೊಂಡು ತೀರ್ಮಾನಿಸುವುದಿಲ್ಲ. ವಾದ ತೀರ್ಮಾನವನ್ನು ಬೆಂಗಳೂರು, ಕರ್ನಾಟಕ, ಭಾರತದಲ್ಲಿ ನಡೆಸಲಾಗುವುದು ಮತ್ತು ಇದರ ಬಗೆಗಿನ ತೀರ್ಪನ್ನು ಬೇರೆ ವ್ಯಾಪ್ತಿಯಲ್ಲಿನ ನ್ಯಾಯಾಲಯದಲ್ಲಿ ಆನಂತರ ನೀಡಬಹುದು.
2. ವ್ಯಾಜ್ಯ ತೀರ್ಮಾನವು ಮುಗಿಯುವುದು ಬಾಕಿಯಿದ್ದಾಗ ನೀವು ಅಥವಾ ನಾವು ಯಾವುದಾದರೂ ಮಧ್ಯಂತರ ಅಥವಾ ಪ್ರಾಥಮಿಕ ಬಿಡುವನ್ನು ನಿಮ್ಮ ಅಥವಾ ನಮ್ಮ ಹಕ್ಕುಗಳು ಅಥವಾ ಆಸ್ತಿಯನ್ನು ರಕ್ಷಿಸಿಕೊಳ್ಳಲು ಬೆಂಗಳೂರು, ಕರ್ನಾಟಕ, ಭಾರತದ ಅಧಿಕೃತ ವ್ಯಾಪ್ತಿಯ ಒಂದು ನ್ಯಾಯಾಲಯದಿಂದ ಪಡೆಯಬಹದು. ವ್ಯಾಜ್ಯ ಇತ್ಯರ್ಥವು ಇಂಗ್ಲಿಷಿನಲ್ಲಿರುತ್ತದೆ.
3. ಈ ನಿಯಮಗಳು ಮತ್ತು ಷರತ್ತುಗಳು ಭಾರತದ ಕಾನೂನಿಗೆ ಒಳಪಟ್ಟಿರುತ್ತವೆ. ವ್ಯಾಜ್ಯ ಇತ್ಯರ್ಥದ ಪ್ರಕ್ರಿಯೆಯನ್ನು ಅವಲಂಬಿಸಿ, ನಾವು ಮತ್ತು ನೀವು ಈ ನಿಯಮಗಳು ಮತ್ತು ಷರತ್ತುಗಳಿಂದ ಅಥವಾ ಅದಕ್ಕೆ ಸಂಬಂಧಿಸಿದ್ದರಿಂದ ಹುಟ್ಟಿದ ಯಾವುದೇ ವಿವಾದ ಅಥವಾ ಹಕ್ಕುಸ್ಥಾಪನೆಯ ನ್ಯಾಯ ತೀರ್ಮಾನವನ್ನು ವಿಶೇಷವಾಗಿ ಬೆಂಗಳೂರು, ಕರ್ನಾಟಕ, ಭಾರತದ ಒಂದು ಸೂಕ್ತ ನ್ಯಾಯಾಲಯದಲ್ಲಿಯೇ ವಿಚಾರಣೆಯಾಗಬಹುದೆಂದು, ಒಪ್ಪಿರುತ್ತೇವೆ.

## 20. ಇತರೆ – ವೈಚಾರಿಕ ಆಸ್ತಿ ಮತ್ತು ಮಾಲೀಕತ್ವದ ಹಕ್ಕುಗಳು

1. ಈ ಸೇವೆಯಲ್ಲಿ ಬಳಸಲಾಗಿರುವ ಅವಶ್ಯಕ ತಂತ್ರಾಂಶದಲ್ಲಿ ವೈಚಾರಿಕ ಆಸ್ತಿ ಮತ್ತು ಇತರೆ ಅನ್ವಯವಾಗುವ ಕಾನೂನುಗಳಿಂದ ರಕ್ಷಿತವಾಗಿರುವ ಮಾಲೀಕತ್ವ ಮತ್ತು ರಹಸ್ಯ ಮಾಹಿತಿಗಳಿರುತ್ತವೆ ಎಂಬುದನ್ನು ಅಂಗೀಕರಿಸಿದ್ದೀರಿ ಮತ್ತು ಒಪ್ಪಿದ್ದೀರಿ. ನೀವು ಪೂರ್ಣವಾಗಿಯಾಗಲೀ ಅಥವಾ ಭಾಗಶಃವಾಗಿಯಾಗಲೀ ಬದಲಾಯಿಸುವುದು, ಬಾಡಿಗೆ ಕೊಡುವುದು, ಭೋಗ್ಯಕ್ಕೆ ಕೊಡುವುದು, ಸಾಲ ನೀಡುವುದು, ಮಾರುವುದು, ಹಂಚುವುದು ಅಥವಾ ಇದರಿಂದ ಸೇವೆ ಅಥವಾ ತಂತ್ರಾಂಶದ ಮೇಲೆ ವ್ಯುತ್ಪನ್ನವಾಗಿರುವ ಕೆಲಸಗಳನ್ನು ಮಾಡುವುದಿಲ್ಲ ಎಂದು ಒಪ್ಪಿಕೊಂಡಿದ್ದೀರಿ. ಸೇವೆಯ ಯಾವುದೇ ಅನಧಿಕೃತ ವಾಣಿಜ್ಯಿಕ ಬಳಕೆ ಅಥವಾ ಇದರ ಸೇವೆಗಳ ಮರು ಮಾರಾಟ ಅಥವಾ ಬೇರೆಯ ಸರ್ವರ್ ಗೆ ಅಥವಾ ಬೇರೆ ತಾಣಕ್ಕೆ ನಕಲು ಮಾಡುವುದು ಅಥವಾ ಮರುಸೃಷ್ಟಿಸುವುದು ಅಥವಾ ಮರುಹಂಚಿಕೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಮತ್ತು ಹಾಗೆ ಮಾಡಿದರೆ ಗಂಭೀರ ಸಿವಿಲ್ ಮತ್ತು ಕ್ರಿಮಿನಲ್ ದಂಡಗಳಿಗೆ ದಾರಿ ಮಾಡಿಕೊಡಬಹುದು.
2. ಮತ್ತೂ ಮುಂದುವರಿದು ನೀವು ಈ ತಂತ್ರಾಂಶವನ್ನು ನಕಲು ಮಾಡುವುದು, ಬದಲಾಯಿಸುವುದು, ಸಂಕಲಿಸಿರುವುದನ್ನು ಹಾಳುಮಾಡುವುದು, ಅನುವಾದಿಸುವುದು,  ಇದರಿಂದ ವ್ಯುತ್ಪನ್ನವೊಂದನ್ನು ಸೃಷ್ಟಿಸುವುದು, ತಂತ್ರಾಂಶವನ್ನು ಹೇಗೆ ಮಾಡಲಾಗಿದೆಯೆಂದು ಕಂಡುಹಿಡಿಯುವುದು, ತಂತ್ರಾಂಶವನ್ನು ಮತ್ತೆ ಜೋಡಿಸುವುದು, ಮೂಲ ಸಂಕೇತಗಳನ್ನು ಕಂಡುಹಿಡಿಯಲು ಪ್ರಯತ್ನಿಸುವುದು, ಜೊತೆಗೆ (ಯಾವುದೇ ಮಿತಿಯಿಲ್ಲದೇ) ಅನಧಿಕೃತವಾಗಿ ಸೇವೆಯ ಒಳಕ್ಕೆ ಪ್ರವೇಶ ಪಡೆಯುವುದು – ಇವುಗಳನ್ನು ಮಾಡುವುದಿಲ್ಲವೆಂದು ಅಂಗೀಕರಿಸಿರುತ್ತೀರಿ. ನಾವು ನಿಮಗೆ ನೀಡಿರುವ ಕೊಂಡಿಯಲ್ಲದೇ ಬೇರಾವುದೇ ಮಾರ್ಗದಿಂದ ಸೇವೆಗೆ ಪ್ರವೇಶ ಪಡೆಯುವುದಿಲ್ಲವೆಂದು ಒಪ್ಪಿಕೊಂಡಿರುತ್ತೀರಿ.

## 21. ಇತರೆ – ವಿನಾಯಿತಿ ಇಲ್ಲ

1. ಈ ನಿಯಮಗಳು ಮತ್ತು ಷರತ್ತುಗಳಲ್ಲಿನ ಯಾವುದೇ ಹಕ್ಕುಗಳು ಮತ್ತು ಅನುಕೂಲಗಳನ್ನು ಜಾರಿಗೆ ತರುವಲ್ಲಿ ನಮ್ಮ ಸೋಲು, ವಿಳಂಬ ಅಥವಾ ಸಾಧ್ಯವಾಗದಿದ್ದರೆ ಅಂಥ ಹಕ್ಕುಗಳು ಮತ್ತು ಅನುಕೂಲಗಳನ್ನು ವಿನಾಯಿತಿಯಲ್ಲಿ ಸೇರಿಸಿರುವುದಿಲ್ಲ. ಯಾವುದಾದರೂ ಒಂದು ಸಂದರ್ಭದಲ್ಲಿ ನೀಡಿದ ವಿನಾಯಿತಿಯನ್ನು ಒಂದು ಮಿತಿಯೆಂದು ಅಥವಾ ಭವಿಷ್ಯದ ಯಾವುದೇ ಹಕ್ಕುಗಳು ಅಥವಾ ಪರಿಹಾರಗಳಿಗೆ ಕೂಡ ವಿನಾಯಿತಿ ಇರುತ್ತದೆ ಎಂದು ಪರಿಗಣಿಸಲಾಗುವುದಿಲ್ಲ.
2. ಇರುವ ಯಾವುದೇ ಬದಲಿ ನಿಯಮಗಳು ಅಥವಾ ಕಾನೂನುಗಳಿದ್ದರೂ, ಯಾವುದೇ ಹಕ್ಕುಸ್ಥಾಪನೆಯ ಅಥವಾ ಸೇವೆಯ ಬಳಕೆಯಿಂದ ಅಥವಾ ಈ ನಿಯಮಗಳು ಮತ್ತು ಷರತ್ತುಗಳಿಂದ ಉಂಟಾಗಬಹುದಾದ ತೊಂದರೆಯ ಬಗ್ಗೆ ದೂರನ್ನು 1(ಒಂದು) ತಿಂಗಳಿನ ಒಳಗಾಗಿ ಸಲ್ಲಿಸಬೇಕು ಎಂದು ನೀವು ಒಪ್ಪಿರುತ್ತೀರಿ.  ಅಂಥ ಹಕ್ಕುಸ್ಥಾಪನೆಯ ಅಥವಾ ಕಾರ್ಯಕಾರಣವು ಹುಟ್ಟಿದಾಗ ಕ್ಲೇಮು ಮಾಡದಿದ್ದರೆ ಎಂದೆಂದಿಗೂ ಅದನ್ನು ರದ್ದುಪಡಿಸಲಾಗುತ್ತದೆ.

## 22. ಇತರೆ – ನಿಯಮಗಳು ಮತ್ತು ಷರತ್ತುಗಳ ಪರಿಷ್ಕರಣೆ

1. ಈ ನಿಯಮಗಳು ಮತ್ತು ಷರತ್ತುಗಳನ್ನು ಯಾವುದೇ ಸಮಯದಲ್ಲಿ ಕಾಲಕಾಲಕ್ಕೆ ಬದಲಾಯಿಸಬಹುದು, ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ(ಪರಿಷ್ಕರಿಸುವುದು) ನಾವು ಮುಂದುವರಿಸದಿರಬಹುದು.
2. ನೀವು ತೀರಾ ಇತ್ತೀಚಿನ ನಿಯಮಗಳು ಮತ್ತು ಷರತ್ತುಗಳ ಆವೃತ್ತಿಯನ್ನು ಯಾವುದೇ ಸಮಯದಲ್ಲಿ: https://www.obopay.com/terms-and-conditions-of-service-for-users/ ಇಲ್ಲಿ ಪರಿಶೀಲಿಸಬಹುದು.
3. ನಾವು ವಿಶೇಷವಾಗಿ ಹೇಳಿಲ್ಲವಾದರೆ, ಪರಿಷ್ಕೃತ ನಿಯಮಗಳು ಮತ್ತು ಷರತ್ತುಗಳು ಅವನ್ನು ನಮ್ಮ ಅಧಿಕೃತ ಜಾಲತಾಣದಲ್ಲಿ ಹಾಕಿದ ದಿನವೇ ಜಾರಿಗೆ ಬರುತ್ತವೆ ಮತ್ತು ಅವಕ್ಕೆ ಬದ್ಧರಾಗಿರಬೇಕಾಗುತ್ತದೆ. ನಮ್ಮ ಸೇವೆಗಳನ್ನು ಪಡೆಯುವ ಮತ್ತು ಬಳಸುವುದನ್ನು ಮುಂದುವರಿಸುವ ಮೂಲಕ ನೀವು ಪರಿಷ್ಕೃತ ನಿಯಮಗಳು ಮತ್ತು ಷರತ್ತುಗಳಿಗೆ ಒಪ್ಪಿಗೆ ಸೂಚಿಸಿದ್ದೀರಿ ಎಂದು ಅರ್ಥ. ನಿಮಗೆ ಪರಿಷ್ಕೃತ ನಿಯಮಗಳು ಮತ್ತು ಷರತ್ತುಗಳಿಗೆ ಒಪ್ಪಿಗೆ ಇಲ್ಲದಿದ್ದರೆ, ತಕ್ಷಣ ನಮ್ಮ ಸೇವೆಗಳನ್ನು ಪಡೆಯುವುದನ್ನು ಮತ್ತು ಬಳಸುವುದನ್ನು ನಿಲ್ಲಿಸಬೇಕು.
4. ನಾವು ನೀಡುವ ಯಾವುದಾದರೂ ಕ್ಯಾಷ್ ಬ್ಯಾಕ್ ಅಥವಾ ಬೋನಸ್ ಗಳನ್ನು ನೀವು ಪಡೆದುದೇ ಆದರೆ, ನೀವು ಪಡೆಯುವ ಆ ಕ್ಯಾಷ್ ಬ್ಯಾಕ್ ಅಥವಾ ಬೋನಸ್ ಗಳಿಗೆ ಸಂಬಂಧಿಸಿದ ವಿಶೇಷವಾದ ಕೆಲವು ನಿಯಮಗಳು ಮತ್ತು ಷರತ್ತುಗಳು ಇರುತ್ತವೆ. ಇಲ್ಲಿನ ನಿಯಮಗಳು ಮತ್ತು ಷರತ್ತುಗಳ ಜೊತೆಗೆ ಹೆಚ್ಚುವರಿಯಾಗಿ ಆ ನಿಯಮಗಳು ಮತ್ತು ಷರತ್ತುಗಳು ಇರುತ್ತವೆ. ನಾವು ಕೊಡಮಾಡಿರುವ ಕ್ಯಾಷ್ ಬ್ಯಾಕ್ ಅಥವಾ ಬೋನಸ್ ಕೊಡುಗೆಗಳನ್ನು ಪರಿಷ್ಕರಿಸುವ, ತಿದ್ದುಪಡಿ ಮಾಡುವ ಅಥವಾ ನಿಲ್ಲಿಸುವ ಹಕ್ಕನ್ನು ಕಾಯ್ದಿರಿಸಿರುತ್ತೇವೆ. ಕ್ಯಾಷ್ ಬ್ಯಾಕ್ ಅಥವಾ ಬೋನಸ್ ಕೊಡುಗೆಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕುಸ್ಥಾಪನೆಯನ್ನು ನೀವು ಮಾಡಲು ಬರುವುದಿಲ್ಲ ಎಂದು ಒಪ್ಪಿದ್ದೀರಿ ಮತ್ತು ಅಂಗೀಕರಿಸಿದ್ದೀರಿ.

## 23. ಇತರೆ – ಗ್ರಾಹಕರ ಕುಂದುಕೊರತೆಗಳ ನಿವಾರಣಾ ಕಾರ್ಯನೀತಿ

ನೀಡಲಾಗಿರುವ ಸೇವೆ(ಗಳ) ಗುಣಮಟ್ಟದ ಬಗ್ಗೆ ನಿಮಗೆ ತೃಪ್ತಿಯಿಲ್ಲದಿದ್ದರೆ, ದಯವಿಟ್ಟು ಈ ವಿಳಾಸಕ್ಕೆ ನೀವು ನಮಗೆ ಬರೆಯಬಹುದು: obopaysupport@obopay.com ಅಥವಾ ಕುಂದುಕೊರತೆಯ ಕಾರ್ಯ ನೀತಿಗಳನ್ನು https://www.obopay.com/grievanceredressalpolicy/ ಇಲ್ಲಿ ನೋಡಬಹುದು. ಹಾಗೆ ನೋಡಲು ಈ ಕೆಳಗಿನ ಕ್ರಮಗಳನ್ನು ಹಂತ ಹಂತವಾಗಿ ಬಳಸಿ ದೂರುಗಳನ್ನು ಸಲ್ಲಿಸಬಹುದು:
ಹಂತಗಳು –

1. **Obopaysupport@obopay.com** 080-66732300
2. **manager@obopay.com** 080-66732300
3. **nodal@obopay.com** 080-66732300

## 24. ಇತರೆ – ಪ್ರತ್ಯೇಕತೆ

a. ಈ ನಿಯಮಗಳು ಮತ್ತು ಷರತ್ತುಗಳ ಯಾವುದೇ ಭಾಗವು ಮೌಲ್ಯಯುತವಾದುದಲ್ಲ ಅಥವಾ ಅನ್ವಯಿಸಬಲ್ಲ ಕಾನೂನುಗಳ ಪ್ರಕಾರ ಜಾರಿಗೊಳಿಸುವಂಥದ್ದಲ್ಲ ಎಂದಾದರೆ ಮೌಲ್ಯಯುತವಲ್ಲದ ಅಥವಾ ಜಾರಿಗೊಳಿಸುವಂಥದ್ದಲ್ಲ ಎಂದಾದರೆ ಇನ್ನೊಂದು ಅರ್ಹ, ಜಾರಿಗೊಳಿಸುವಂಥ ಮೂಲ ಉದ್ದೇಶಕ್ಕೆ ತುಂಬಾ ಸಮೀಪವಾಗಿರುವ ವ್ಯವಸ್ಥೆಗೆ ಬದಲಾಗುತ್ತದೆ, ಹಾಗೂ ನಿಯಮಗಳು ಮತ್ತು ಷರತ್ತುಗಳಲ್ಲಿ ಉಳಿದಿರುವಂಥದ್ದು ಜಾರಿಯಲ್ಲಿ ಮುಂದುವರಿಯುತ್ತದೆ.